(ಇ) ಹಬ್ಬಳ್ಳಿಯಲ್ಲಿ ಉಚ್ಚನ್ಯಾಯಾಲಯದ ಪೀಠದ ಸ್ಥಾಪನೆ.

ಅಧ್ಯಕ್ಷರು:- ಚಂದ್ರ ಕಾಂತ್ ಬೆಲ್ಲದ್, ಕಾಂಗ್ರೆಸ್ ಪರವಾಗಿ ಮಂಜುನಾಥ್ ಸಿ.ಕುನ್ನೂರ್ ಕೇಳಿದ್ದಾರೆ, ನಿಮ್ಮ ಮೂರು ಜನರಲ್ಲಿ ಒಬ್ಬರು ಪ್ರಸ್ತಾಪ ಮಾಡಿ. ಮಂಜುನಾಥ್ ಕುನ್ನೂರವರು ಒಬ್ಬರು ಪ್ರಸ್ತಾಪ ಮಾಡುತ್ತಾರೆ. ಹೈಕೋರ್ಟ್ ಬಗ್ಗೆ ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ. ಟೈಮ್ ಕಡಿಮೆ ಇದೆ. ನೀವು ಪ್ರಾರಂಭ ಮಾಡಿ ಎರಡು ನಿಮಿಷದಲ್ಲಿ ಮುಗಿಸಬೇಕು.

+ ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಆಗಬೇಕು ಎನ್ನುವುದು ಬಹಳ ದಿವಸಗಳಿಂದ ನಡೆಯುತ್ತಿರುವಂತಹ ವಿಷಯ. ಜಸ್ಟೀಸ್ ಜಸ್ವಂತ್ ಸಿಂಗ್‌ರವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ, ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದು ಅತಿ ಅವಶ್ಯ ಎಂದು ಹೇಳಿದ್ದಾರೆ. ಮನೆ ಬಾಗಿಲಿಗೆ ನ್ಯಾಯ ಎಂದು ಸರ್ಕಾರ ಘೋಷಣೆ ಮಾಡಿದೆ. ಅದಕ್ಕೆ ಇವತ್ತು ಉತ್ತರ ಕರ್ನಾಟಕಕ್ಕೆ, ಜನತೆಗೆ, ಮತ್ತು ನಿಜವಾದ ಬಡ ಕಕ್ಷಿದಾರರಿಗೆ ನ್ಯಾಯ ಒದಗಿಸಬೇಕೆಂದರೆ ಹುಬ್ಬಳ್ಳಿ, ಧಾರವಾಡದಲ್ಲಿ ಅಂದರೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದು ಅತಿ ಅವಶ್ಯಕ ಇದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಆಗಬೇಕೆಂದು ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯಲ್ಲಿ ಎರಡೂ ಸದನಗಳಲ್ಲಿ ಸರ್ವಾನುಮತದಿಂದ ಒಂದು ಗೊತ್ತುವಳಿ ಪಾಸ್ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಬರೆದು ಹಾಕಿದರೆ ಅವರು ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕೆಂದು ಅವರು ಬರೆದ್ದಿದಾರೆ. ಮತ್ತು ರಾಜ್ಯ ಸರ್ಕಾರದವರೂ ಮೊನ್ನೆ ಒಂದು ಪ್ರಶ್ನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಉತ್ತರ ಕೊಟ್ಟಾಗ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳ ಉತ್ತರವನ್ನು, ಅವರ ಒಪ್ಪಿಗೆಯನ್ನೂ ಪಡೆದುಕೊಂಡು ಈ ವಿಷಯವನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಸ್ಟೇಟ್ಸ್ ರೀಆರ್ಗನೈಸೇಷನ್ ಆ್ಯಕ್ಟ್ ಪ್ರಕಾರ 'with the consultation of the High Court' ಅದನ್ನು ಮಾಡಬೇಕೇ ಹೊರತು ವಿತ್ ಕನ್‌ಸಂಟ್ ಅಲ್ಲ. ಹಿಂದೆ ಮಹಾ ರಾಷ್ಟ್ರದಲ್ಲಿ ಶ್ರೀ ಎ.ಆರ್.ಅಂತೋಲೆಯವರು ಮುಖ್ಯಮಂತ್ರಿಗಳಾಗಿದ್ದಾಗ ಔರಂಗಾಬಾದ್‌ನಲ್ಲಿ ಪೀಠ ಸ್ಥಾಪನೆ ಮಾಡುವಾಗ ಅವರು ಹೈಕೋರ್ಟಿನ ಕನ್‌ಸಲ್ಟೇಷನ್ ಸಹಿತ ಮಾಡಿರಲಿಲ್ಲ. ಸ್ಟೇಟ್ ಗವರ್ನಮೆಂಟ್ ಒಪ್ಪಿಗೆ ಕೊಟ್ಟರು, ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದುಕೊಂಡು ಬಂದರು. ಔರಂಗಾಬಾದ್‌ನಲ್ಲಿ ಹೈಕೋರ್ಟಿನ ಪೀಠವನ್ನು ಸ್ಥಾಪನೆ ಮಾಡಿದರು. ಅದಕ್ಕೆ ಇವತ್ತು ನಮ್ಮ ಕರ್ನಾಟಕದವರೇ ಮಾನ್ಯ ಪ್ರಧಾನ ಮಂತ್ರಿಗಳು ಇದ್ದಾರೆ, ದಯವಿಟ್ಟು ಮಾನ್ಯ ಪ್ರಾಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಹುಬ್ಬಳ್ಳಿ ಧಾರವಾಡದಲ್ಲಿ ಒಂದು ಹೈಕೋರ್ಟ್ ಪೀಠ ಸ್ಥಾಪನೆ ಮಾಡುವ ಕನಸು ಬಹಳ

ವರ್ಷಗಳಿಂದ ಇದೆ, ಆ ಹೈ ಕೋರ್ಟ್ ಪೀಠ ಸ್ಥಾಪನೆ ಆಗುವುದಕ್ಕೆ ಪ್ರಯತ್ನ ಮಾಡಬೇಕು. ಇದರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಮಂಜುನಾಥ್ ಸಿ.ಕುನ್ನೂರ್ (ಶಿಗ್ಗಾಂವ್):- ಮಾನ್ಯ ಸಭಾಧ್ಯಕ್ಷರೆ, ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡತಕ್ಕಂತಹ ವಿಷಯ ಆಗಲೇ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಂತಹ ವಿಷಯ. ಈ ಬಗ್ಗೆ ಕರ್ನಾಟಕ ರಾಜ್ಯದಿಂದ ಸುಮಾರು ಆರು ಜನ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಇಲ್ಲಿ ಒಂದು ಉಚ್ಚ ನ್ಯಾಯಾಲಯ ಪೀಠ ಸ್ಥಾಪನೆ ಮಾಡಬೇಕೆಂದು ಶಿಫಾರಸ್ಸು ಕೂಡ ಮಾಡಿದ್ದಾರೆ. ಇವತ್ತು ಈ ಉಚ್ಚ ನ್ಯಾಯಾಲಯದ ಪೀಠ ಆಗುವುದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಜಗದೀಶ್ ಶೆಟ್ಟರ್‌ರವರು ಹೇಳಿದಂತೆ ಇವತ್ತು ಮುಖ್ಯ ನ್ಯಾಯಮೂರ್ತಿಗಳ ಒಂದು ಒಪ್ಪಿಗೆ ಬೇಕಾಗಿಲ್ಲ ಎನ್ನತಕ್ಕಂತಹ ವಿಚಾರದಲ್ಲಿ ಸ್ಟೇಟ್ ರಿ ಆರ್ಗನೈಸೇಷನ್ ಆ್ಯಕ್ಟ್ ಪ್ರಕಾರ in consultation with High Court ಇರುವುದರಿಂದ ಅವರ ಜೊತೆ ಕನ್‌ಸಲ್ಟೇಷನ್ ಮಾಡಿ ಕೇಂದ್ರದಲ್ಲಿರತಕ್ಕಂತಹ ಪ್ರಧಾನ ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ಹುಬ್ಬಳ್ಳಿ ಧಾರವಾಡದಲ್ಲಿ ನ್ಯಾಯವಾದಿಗಳು ಮತ್ತು ಜನರು ಕಳೆದ ಒಂದು ವಾರದಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತಿನ ದಿವಸ ನ್ಯಾಯವಾದಿಗಳೂ ಕೂಡ ಧಾರವಾಡ ಜಿಲ್ಲೆಯಲ್ಲಿ ಹಂತಹಂತವಾಗಿ ಬಂದ್‌ಗಳನ್ನು ಕೂಡ ಮಾಡಿ ಜನರು ಇವತ್ತು ಇಲ್ಲಿ ಉಚ್ಚ ನ್ಯಾಯಾಲಯದ ಪೀಠ ಕೂಡಲೇ ಆಗಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡದಲ್ಲಿ ಎಲ್ಲಾ ಕೋರ್ಟ್‌ಗಳನ್ನು ಒಂದು ವಾರದ ಒಳಗೆ ಬಂದ್ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಜನರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಇನ್ನು ಹಂತ ಹಂತವಾಗಿ ಅವರು ವಿಧ ವಿಧವಾದ ಚಳುವಳಿಗಳನ್ನು ಪ್ರಾರಂಭ ಮಾಡುವುದಕ್ಕೆ ಅಲ್ಲಿ ವಕೀಲರು ಮತ್ತು ಜನರು ಇವತ್ತು ಮುಂದೆ ಬಂದಿದ್ದಾರೆ. ಆ ಕಾರಣ ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳಿಂದ ನ್ಯಾಯಕ್ಕಾಗಿ ಬೆಂಗಳೂರಿಗೆ ಬರಬೇಕೆಂದರೆ ಅದು ಬಹಳಷ್ಟು ತೊಂದರೆಯಾಗುತ್ತದೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ನಮ್ಮವರೇ ಪ್ರಧಾನಮಂತ್ರಿಗಳು ಇರುವುದರಿಂದ ಅವರ ಗಮನ ಸೆಳೆದು ಕೂಡಲೇ ಈ ಒಂದು ಉಚ್ಚನ್ಯಾಯಾಲಯದ ಪೀಠ ಅಲ್ಲಿ ಸ್ಥಾಪನೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಚಂದ್ರಕಾಂತ್ ಬೆಲ್ಲದ್ (ಧಾರವಾಡ):- ಸನ್ಮಾನ್ಯ ಅಧ್ಯಕ್ಷರೆ, ಇದು ಉತ್ತರ ಕರ್ನಾಟಕದ ಬಹಳ ವರ್ಷಗಳ ಬೇಡಿಕೆಯಾಗಿದೆ. ಜನ ಸಾಮಾನ್ಯರಿಗೆ ಇವತ್ತು ಈ ಒಂದು ಕೋರ್ಟ್ ನ್ಯಾಯಕ್ಕಾಗಿ ಬರುವುದು ಬಹಳ ಕಷ್ಟವಾಗುತ್ತಿದೆ. ಜನ ಸಾಮಾನ್ಯರ ದೃಷ್ಟಿಯಿಂದ ಇಡೀ ಉತ್ತರ ಕರ್ನಾಟಕದ ಜನತೆಯ ದೃಷ್ಟಿಯಿಂದ, ಬರೀ

ನ್ಯಾಯವಾದಿಗಳು ಅಲ್ಲ, ಇಡೀ ಉತ್ತರ ಕರ್ನಾಟಕದ ಜನತೆಯ ಹಿತ ದೃಷ್ಟಿಯಿಂದ ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ ಧಾರವಾಡಕ್ಕೆ ಒಯ್ಯುವಂತಹ ಅಗತ್ಯ ಇದೆ. ಇದರ ಬಗ್ಗೆ ಹಿಂದೆ ಇದ್ದಂತಹ ಡಿ.ಎಮ್.ಚಂದ್ರಶೇಖರ್‌ರವರ ನೇತೃತ್ವದಲ್ಲಿ ಆಗಲೇ ಆಗಬೇಕೆಂದು ಅವರು ನಿರ್ಣಯ ಕೊಟ್ಟಿದ್ದಾರೆ. ಜಸ್ವಂತ್ ಸಿಂಗ್‌ರವರೂ ನಿರ್ಣಯ ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟಿಗೆ ಹೋಗಬೇಕಾದ ಅಗತ್ಯತೆ ಇಲ್ಲ. ರಾಜ್ಯ ಸರ್ಕಾರ ತಾನೇ ನಿರ್ಣಯ ತೆಗೆದುಕೊಳ್ಳಬಹುದು. ದಯವಿಟ್ಟು ಶ್ರೀಮಾನ್ ಜೆ.ಹೆಚ್.ಪಟೇಲರು ಇದನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಅದು ಬಹಳ ಉಗ್ರವಾದ ಸ್ವರೂಪ ತಾಳುವುದಕ್ಕೆ ಮೊದಲೇ ಆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಅಶೋಕ್ ಎಸ್.ಕಾಟವೆ (ಹುಬ್ಬಳ್ಳಿ):- ಸನ್ಮಾನ್ಯ ಅಧ್ಯಕ್ಷರೆ, ಕಳೆದ 20 ವರ್ಷಗಲಿಂದ ಈ ಹೋರಾಟ ನಡೆದಿದೆ. ಕಳೆದ ಒಂದು ವಾರದಿಂದ ನಮ್ಮ ನ್ಯಾಯವಾದಿಗಳು ಬೀದಿಗಿಳಿದ್ದಾರೆ. ಆಮೇಲೆ ನಮ್ಮ ನ್ಯಾಯವಾದಿಗಳು ಕೋರ್ಟ್ ಬಾಯ್‌ಕಾಟ್ ಮಾಡಿದ್ದಾರೆ. ಆದ್ದರಿಂದ ಈ ಒಂದು ಹೈಕೋರ್ಟಿನ ಬಗ್ಗೆ ನಮ್ಮ ಉತ್ತರ ಕರ್ನಾಟಕ ಪೂರ್ಣ ಏನು ಈಗ ಒಂದು ಅಲ್ಲಿ ಹೈಕೋರ್ಟ್ ಆಗಬೇಕು, ಅಲ್ಲಿ ಒಂದು ಭಾಷೆ ಏನು ಹೇಳುತ್ತಾರೆಂದರೆ ''ಗೆದ್ದವ ಸೋತ, ಸೋತವ ಸತ್ತ ಎಂದು'' ಇವತ್ತು ಆ ಪರಿಸ್ಥಿತಿ ಬಂದಿದೆ. ಒಬ್ಬ ಸಣ್ಣ ಬಡವ ನ್ಯಾಯಕ್ಕಾಗಿ ಬೆಂಗಳೂರಿಗೆ ಬರಬೇಕಾದರೆ 5,000 ರೂಪಾಯಿ ತೆಗೆದುಕೊಂಡು ಬರಬೇಕು. ಆದ್ದರಿಂದ ನೀವು ನ್ಯಾಯ ಮನೆಗೆ ಒದಗಿಸುತ್ತೇವೆಂದು ಹೇಳುತ್ತಿದ್ದೀರಿ, ಇವತ್ತು ನ್ಯಾಯ ಮನೆಗೆ ಒದಗಿಸುತ್ತೇವೆ ಎಂದರೆ ಅದು ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ ಬಂದರೆ ಆ ಎಂಟು ಜಿಲ್ಲೆಯ ನಮ್ಮ ನ್ಯಾಯ ಕೇಳುವಂತಹ ಜನರಿಗೆ ಅನುಕೂಲವಾಗುತ್ತದೆ. ಮತ್ತು ಅದೇ ರೀತಿ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ, ಮದ್ರಾಸ್‌ನಲ್ಲಿ ಮಾಡಿದ್ದಾರೆ, ಆಂಧ್ರದಲ್ಲಿ ಕೂಡ ಮಾಡಿದ್ದಾರೆ, ಅದೇ ರೀತಿ ನಮ್ಮ ಕರ್ನಾಟಕದಲ್ಲಿ ಏಕೆ ಮಾಡಬಾರದು? ಹುಬ್ಬಳ್ಳಿ ಒಂದು ಸೆಂಟ್ರಲ್ ಪ್ಲೇಸ್. ಕನ್ನಡಿಗರಿಗೆ ಸಿಗಬೇಕಾದ ಸವಲತ್ತುಗಳು ಎಂದರೆ ಹುಬ್ಬಳ್ಳಿಯಲ್ಲಿ ಮಾಡಿದರೆ ಮಾತ್ರ ಆ ಒಂದು ಎಂಟು ಜಿಲ್ಲೆಯ ಜನರಿಗೆ ಅನುಕೂಲವಾಗುತ್ತದೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಸನ್ಮಾನ್ಯ ಸಭಾಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಹೈಕೋರ್ಟಿನ ಪೀಠ ಕೊಡತಕ್ಕಂಥದ್ದಕ್ಕೆ ಎಲ್ಲಾ ವಕೀಲರು ಬಹಳ ದಿವಸಗಳಿಂದ ಒತ್ತಾಯ ಮಾಡುತ್ತಿದ್ದಾರೆ. ನಮ್ಮ ಪ್ರಧಾನ ಮಂತ್ರಿಯವರು ನಮ್ಮ ಕರ್ನಾಟಕದವರೇ ಇರತಕ್ಕಂತಹ ಸಂದರ್ಭದಲ್ಲಿ ಇಡೀ ಕರ್ನಾಟಕಕ್ಕೆ ಹೆಮ್ಮೆ ತರತಕ್ಕಂತಹ ವಿಷಯ ಎಂದರೆ ಇಡೀ ದಕ್ಷಿಣ ಭಾಗದಲ್ಲಿರತಕ್ಕಂತಹ ಆಂಧ್ರಪ್ರದೇಶ, ಕೇರಳ, ಮದ್ರಾಸ್, ಮಹರಾಷ್ಟ್ರ, ಗೋವಾ ಮತ್ತು ಪಾಂಡಿಚೇರಿ ಇವೆಲ್ಲವನ್ನೂ ಸೇರಿ ಕರ್ನಾಟಕದಲ್ಲಿ ಸುಪ್ರೀಂ ಕೋರ್ಟ್ ಪೀಠವನ್ನು ಬೆಂಗಳೂರಿನಲ್ಲಿ ತರುವುದಕ್ಕೆ ನೀವು

ಒತ್ತಾಯ ತರಬೇಕು. ತಂದಿದ್ದೇ ಆದರೆ ಅವರೇ ಹೇಳಿದರು 5,000 ರೂಪಾಯಿ ಖರ್ಚಾಗುತ್ತದೆ, ಎಂದು, ನಾನು ಬೆಂಗಳೂರಿನಲ್ಲಿ ಒಂದು ವಕೀಲಳಾಗಿ ಕೆಲಸ ಮಾಡಬೇಕಾದರೆ ಬೆಂಗಳೂರಿನಿಂದ ಬೆಳಿಗ್ಗೆ ಡೆಲ್ಲಿಗೆ ಹೋಗಿ ಪ್ರಾಕ್ಟೀಸ್ ಮಾಡಬೇಕಾದರೆ 20,000 ರೂ. ಕಕ್ಷಿದಾರ ಕೊಡಬೇಕಾಗುತ್ತದೆ. ಬರೀಹೋಗಿ ಬರಬೇಕಾದರೆ ಅಷ್ಟು ಖರ್ಚಾಗುತ್ತದೆ. ಒಂದು ಸಾರಿ ಅಡ್ಮಿಷನ್, ಮತ್ತೊಂದು ಸಾರಿ ಹಿಯರಿಂಗ್, ಒಂದು ಸಾರಿ ಅಡ್ಜರ್ನ್ ಎಂದರೆ ಒಂದು ಲಕ್ಷ ರೂಪಾಯಿ ಕಡಿಮೆ ಒಬ್ಬ ಕಕ್ಷಿದಾರನಿಗೆ ಸುಪ್ರೀಂ ಕೋರ್ಟಿನಲ್ಲಿ ಹೋಗಿ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಪ್ರಧಾನ ಮಂತ್ರಿಗಳ ಹತ್ತಿರ ಹೋಗೋಣ, ನಾವೆಲ್ಲರೂ ಬರುತ್ತೇವೆ, ಇಲ್ಲಿ ಒಂದು ಪಾಲಿಸಿ ಡಿಸಿಷನ್ ಮಾಡಿ. ಇದು ಒಳ್ಳೆಯ ಕ್ಲೈಮೇಟ್. ಬೆಂಗಳೂರಿನಲ್ಲಿ ಎಲ್ಲದಕ್ಕೂ ಬಹಳಷ್ಟು ಚೆನ್ನಾಗಿದೆ. ತಾವು ನಿರ್ಣಯ ಮಾಡಿ, ಒಳ್ಳೆಯ ಬಿಲ್ಡಿಂಗ್ ಕೊಡುತ್ತೇವೆ, ಜಾಗ ಕೊಡುತ್ತೇವೆ, ಸುಪ್ರೀಂ ಕೋರ್ಟ್‌ನ ಪೀಠವನ್ನು ಸಹ ಇಲ್ಲಿ ಕೋರ್ಟ್‌ನಲ್ಲಿ ಮಾಡಬೇಕೆಂದು ಆ ಅವಕಾಶವನ್ನು ಉಪಯೋಗಿಸಿಕೊಂಡು ಹೇಳುತ್ತಾ ಈ ಸಂದರ್ಭದಲ್ಲಿ ತಾವು ಇದರ ಬಗ್ಗೆಯೂ ನಿರ್ಣಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಶ್ರೀ ಬೆಲ್ಲದ್‌ರವರು ಹುಬ್ಬಳ್ಳಿ ಧಾರವಾಡ ಎಂದರೆ, ಇನ್ನೊಬ್ಬರು ಹೈದರಾಬಾದ್ ಕರ್ನಾಟಕ ಎಂದರು, ಇನ್ನೊಬ್ಬರು ಇನ್ನೊಂದು ರೀತಿ ಹೇಳಿದರು. ಕರ್ನಾಟಕ ಏಕೆ ಹಂಚುತ್ತಿದ್ದೀರಿ, ನಾವೆಲ್ಲಾ 1956ರಲ್ಲಿ ಒಟ್ಟಿಗೆ ಸೇರಿ ಒಂದೇ ಕರ್ನಾಟಕ ಎಂದು ಆಗಿರುವುದು. ಭಾಗ ಮಾಡುವುದು ಬೇಡ, ಎಲ್ಲಿ ಅವರಿಗೆ ಅನುಕೂಲಗಳು ಬೇಕು ಕೇಳಲಿ. ನಮಗೆ ನಮ್ಮ ಹೈದರಾಬಾದ್ ಕರ್ನಾಟಕ ಬೇಕು ಹುಬ್ಬಳ್ಳಿ ಬೇಕು, ಬಾಂಬೆ ಕರ್ನಾಟಕ ಬೇಕೆಂದು ಹಂಚಿಕೊಂಡಿದೆ.....

(ಗೊಂದಲ)

ಅಧ್ಯಕ್ಷರು:- ನೀವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:- ನಾವು ಸಮಗ್ರ ಕರ್ನಾಟಕದ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ.

ಶ್ರೀ ಹೆಚ್.ಶಿವಪ್ಪ:- ದಾವಣಗೆರೆಗೆ ಕೊಟ್ಟರೆ ಬಹಳ ಒಳ್ಳೆಯದು.....

ಅಧ್ಯಕ್ಷರು:- ಅವರು ಯಾರು ಉತ್ತರ ಕರ್ನಾಟಕ, ಮುಂಬೈ ಕರ್ನಾಟಕ ಎಂದು ಹೇಳಲಿಲ್ಲ. ನಮ್ಮ ರಾಜ್ಯದ ಆ ಭಾಗದಲ್ಲಿ ಇರತಕ್ಕಂಥ ಜನರಿಗೆ ಕಷ್ಟ ಆಗುತ್ತದೆ ಎಂದು ಹೇಳಿದ್ದಾರೆ. ಉತ್ತರ ಕರ್ನಾಟಕ ಎಂದರೆ ಎಂಟು ಜಿಲ್ಲೆಗಳು ಯಾವುದು ಇವೆ ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆ ಭಾಗದ ಕಕ್ಷಿದಾರರಿಗೆ ಅನುಕೂಲ ಆಗಬೇಕು ಎನ್ನತಕ್ಕಂಥದ್ದನ್ನು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ಪೀಠದ ಬಗ್ಗೆ ನಾನು ಮಾತನಾಡುವುದಿಲ್ಲ. ನಾನು ಹೈಕೋರ್ಟ್ ಪೀಠದ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಅಶೋಕ್ ಎಸ್.ಕಾಟ್ಟೆ:- ನಾವು ಹೈಕೋರ್ಟ್ ಪೀಠದ ಬಗ್ಗೆ ಮಾತನಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ನಾನು ಹೈಕೋರ್ಟ್ ಪೀಠದ ಬಗ್ಗೆ ಮಾತನಾಡುತ್ತಿಲ್ಲ. ಸುಪ್ರೀಮ್ ಕೋರ್ಟ್ ಪೀಠವನ್ನು ನೀವು ಎಲ್ಲಿಗಾದರೂ ತಂದುಕೊಳ್ಳಿ, ಹೈಕೋರ್ಟ್ ಪೀಠವನ್ನು ಎಲ್ಲಿಗಾದರೂ ತಂದುಕೊಳ್ಳಲಿ, ನನ್ನದು ಅದು ಪ್ರಶ್ನೆಯಲ್ಲ. ನಾನು ಬೆಳಗಾಂ ಇರಲಿ ಎಂದು ಹೇಳಿದೆ. ಏಕೆ ಇರಲಿ ಎಂದು ಹೇಳಿದೆನೆಂದರೆ ಬೆಳಗಾಂ ಬೆಳೆಯಲಿ, ಬೆಳಗಾಂ ಉಳಿಯಲಿ ಎನ್ನುವುದಕ್ಕಾಗಿ ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್:- ನಾವು ಹೋರಾಟ ಮಾಡುತ್ತಿದ್ದೇವೆ. ಆದರೆ ಮಾನ್ಯ ವಾಟಾಳ್ ನಾಗರಾಜ್ ಉದ್ದೇಶವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದು ಸರಿ ಇಲ್ಲ.

ಅಧ್ಯಕ್ಷರು:- ಒಂದು ನಿಮಿಷ ವ್ಯರ್ಥವಾದರೂ ಕೂಡ ನನಗೆ ಕಷ್ಟವಾಗುತ್ತದೆ. ಆದ್ದರಿಂದ ತಾವು ದಯಮಾಡಿ ಸಹಕರಿಸಿ ಎಂದು ನಾನು ತಮ್ಮೆಲ್ಲರನ್ನು ಕೇಳಿಕೊಳ್ಳತಕ್ಕಂಥದ್ದು.

+ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಉಚ್ಚ ನ್ಯಾಯಾಲಯದ ಒಂದು ಪೀಠವನ್ನು ಹುಬ್ಬಳ್ಳಿ -ಧಾರವಾಡ ಭಾಗದಲ್ಲಿ ತೆರೆಯಬೇಕೆಂದು ಹೇಳುತ್ತಾ ಇರುತಕ್ಕಂಥದ್ದು ಹಲವಾರು ವರ್ಷದಿಂದ ಬೇಡಿಕೆ ಈ ಸದನದಲ್ಲಿ, ಮೇಲ್ಮನೆಯಲ್ಲಿ ಕೂಡ ಈ ಒಂದು ಪೀಠವನ್ನು ಸ್ಥಾಪನೆ ಮಾಡಬೇಕೆಂದು ಸದನದಲ್ಲಿ, ಠರಾವುಗಳನ್ನು ಬಹಳ ವರ್ಷಗಳ ಹಿಂದೆ ಮಾಡಿಸಿರತಕ್ಕಂಥದ್ದು ತಮಗೆಲ್ಲರಿಗೂ ಗೊತ್ತಿದೆ. ತಮಗೆಲ್ಲರಿಗೂ ತಿಳಿದಿರುವಂತೆ ಹಿಂದೆ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀ ಹೆಚ್.ಡಿ.ದೇವೇಗೌಡರು ಆ ಸಂದರ್ಭದಲ್ಲಿ ವಿಷಯವನ್ನು ಪ್ರಸ್ತಾಪ ಬಂದಾಗ ಅವರು ನೇರವಾಗಿ ಅಂದಿನ ಪ್ರಧಾನಿಗಳಾದ ಶ್ರೀ ನರಸಿಂಹರಾಯರಿಗೆ ಒಂದು ಪತ್ರವನ್ನು ಬರೆದು ಇದರ ಬಗ್ಗೆ ಕೂಡಲೇ ತಾವು ಗಮನಹರಿಸಬೇಕೆಂದು ಹೇಳಿದರು. ಇದಾದಮೇಲೆ ನಾನು ಹಿಂದಿನ ಮುಖ್ಯಮಂತ್ರಿಗಳವರ ಜೊತೆಯಲ್ಲಿ ದೆಹಲಿಗೆ ಹೋಗಿ ಅಂದಿನ ಕಾನೂನು ಮಂತ್ರಿಗಳು ಆಗಿದ್ದಂಥ ಶ್ರಿ ಭಾರದ್ವಾಜರವರೊಂದಿಗೆ ಅದರ ಬಗ್ಗೆ ಮಾತುಕತೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಅವರು ಈ ಒಂದು ಶಿಫಾರಸ್ಸನ್ನು ನೀವು ಮಾಡಬೇಕಾದರೆ ರಾಜ್ಯ ಉಚ್ಚನ್ಯಾಯಾಲಯದ ಒಂದು ಶಿಫಾರಸ್ಸನ್ನು ನೀವು ತರಲೇಬೆಂಕೆಂದು ತಮ್ಮ ಮನಸ್ಸಿನ ಇಂಗಿತವನ್ನು ವ್ಯಕ್ತಮಾಡಿದರು. ಆ ವಿಚಾರದಲ್ಲಿ ನಾವು ರಾಜ್ಯ ಹೈಕೋರ್ಟಿನ ಒಂದು ಸಮ್ಮತಿಯನ್ನು ಕೇಳಿದಾಗ ಬಹುಶಃ ಅಕ್ಟೋಬರ್, ನವೆಂಬರ್ 1994ನೇ ಇಸ್ವಿಯಲ್ಲಿ, ಮುಖ್ಯ ನ್ಯಾಯಾಧೀಶರಾದ ಪೇಂಡ್ಸೆರವರು ಉಚ್ಚ

ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರ ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ ಇದನ್ನು ಚರ್ಚೆ ಮಾಡಿದರು. ಇದನ್ನು ಚರ್ಚೆ ಮಾಡಿದಾಗ ಅಲ್ಲಿ ಒಮ್ಮತದಿಂದ ಮೂಡಿ ಬಂದಂಥ ಅಭಿಪ್ರಾಯ ಯಾವುದು ಎಂದರೆ ಉಚ್ಚ ನ್ಯಾಯಾಲಯದ ಪೀಠವನ್ನು ಈಗ ಕೊಡುತ್ತಾ ಇರತಕ್ಕಂಥ ಸ್ಥಳದಿಂದ ಬೇರೊಂದು ಸ್ಥಳಕ್ಕೆ ಪೀಠವನ್ನು ಮಾಡುವುದು ಸರಿಯಲ್ಲವೆಂದು. ಆ ಒಂದು ಸ್ಪಷ್ಟವಾಗಿರತಕ್ಕಂಥ ತೀರ್ಮಾನವನ್ನು ಅವರು ತೆಗೆದುಕೊಂಡು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಬೇಕಾದರೆ ಅವರು ತೆಗೆದುಕೊಂಡಿರತಕ್ಕಂಥ ತೀರ್ಮಾನ ಇದೆ. ಅಂದರೆ ಉಚ್ಚನ್ಯಾಯಾಲಯದ 31 ಜನ ಸದಸ್ಯರು ಅಂದು ಸಭೆ ಸೇರಿ ತೆಗೆದುಕೊಂಡಿರತಕ್ಕಂಥ ತೀರ್ಮಾನ.

"Establishment of a permanent bench of the High Court outside its principal seat would lead to impairment of the efficiency of the High Court with an inevitable consequence of lowering the standard of administration of justice in the State and therefore, it is not desirable to locate a permanent bench outside its principal seat".

ಇದು ಅವರು ತೆಗೆದುಕೊಂಡಿರತಕ್ಕಂಥ ತೀರ್ಮಾನ. ಈ ತೀರ್ಮಾನ ಬಂದಮೇಲೆ ನಾನು ಮತ್ತು ಅಂದಿನ ಮುಖ್ಯಮಂತ್ರಿಗಳು ಪುನಃ ಭಾರದ್ವಾಜ್‌ರವರಿಗೆ ಭೇಟಿ ಮಾಡಿ ಅವರ ಜೊತೆ ಚರ್ಚೆ ಮಾಡಿ, ಅಲ್ಲಿಂದ ಅಂದಿನ ಮುಖ್ಯಮಂತ್ರಿಗಳು ಅಂದಿನ ಪ್ರಧಾನಿಗಳಿಗೂ ಕೂಡ ಒಂದು ಪತ್ರವನ್ನು ಬರೆದರು. ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಕೇಳಿಕೊಂಡಾದ ಮೇಲೆ ಉಚ್ಚ ನ್ಯಾಯಾಲಯದಲ್ಲಿರತಕ್ಕಂಥ ಮುಖ್ಯ ನ್ಯಾಯಾಧೀಶರಿಂದ ಅಭಿಪ್ರಾಯವನ್ನು ಪಡೆದುಕೊಂಡ ತಾವು ತಮ್ಮ ವಿಚಾರವನ್ನು ಪುನಃ ಮಂಡಿಸಿ ಎಂದು ಪ್ರಧಾನಮಂತ್ರಿಗಳು ತಿಳಿಸಿದರು. ಇದಾದ ಮೇಲೆ ಇಂದಿನ ಪ್ರಧಾನಿಗಳು ಅಂದಿನ ಮುಖ್ಯಮಂತ್ರಿಗಳು.....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹುಬ್ಬಳ್ಳಿಯಲ್ಲಿ ಆ ರೀತಿ ಹೇಳಿರಬೇಕು. ಗುಲಬರ್ಗಾಕ್ಕೆ ಯಾವುದಾದರೂ ಒಂದು ವ್ಯವಸ್ಥೆ ಇರಬೇಕಲ್ಲಾ.

ಶ್ರೀ ಎಂ.ಸಿ.ನಾಣಯ್ಯ:- ಹೇಳುತ್ತೇನೆ, ಮಾನ್ಯ ಸಭಾಧ್ಯಕ್ಷರೇ, ಅದರ ಮಧ್ಯೆ ಏನಾಯಿತು ಎಂದರೆ....

ಶ್ರೀ ವಾಟಾಳ್ ನಾಗರಾಜ್:- ನನಗೆ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುತ್ತೀರಿ, ನೋಡಿ ಇಲ್ಲಿ ಪಕ್ಕದಲ್ಲೇ ಶುರುಮಾಡುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ:- ಖರ್ಗೆಯವರೇ, ಅದನ್ನೂ ಹೇಳುತ್ತೇನೆ. ಫೆಬ್ರವರಿ 1996ನೇ ಇಸ್ವಿಯಲ್ಲಿ ಅಂದಿನ ಮುಖ್ಯಮಂತ್ರಿಗಳು, ಇಂದಿನ ಪ್ರಧಾನಮಂತ್ರಿಗಳು

ಮುಖ್ಯ ನ್ಯಾಯಾಧೀಶರಿಗೆ ಒಂದು ಪತ್ರವನ್ನು ಬರೆಯುವುದರ ಮುಖಾಂತರ ಇದರ ಬಗ್ಗೆ ನೀವು ಪುನಃ ರಿಕನ್ಸಿಡರ್ ಮಾಡಿ ಎಂದು ಪತ್ರವನ್ನು ಬರೆದರು.

ಅಧ್ಯಕ್ಷರು:- ಅಡ್ಮಿನಿಸ್ಟ್ರೇಟಿವ್ ಕನ್ವಿನಿಯನ್ಸ್‌ಗೆ ತೊಂದರೆಯಾಗಬಹುದೆಂದು ಅವರು ಆ ರೀತಿ ಹೇಳಿರಬಹುದು. ಕಾನೂನು ಸಚಿವರಾದ ತಾವು ಈ ಸದನದ ಭಾವನೆಗಳನ್ನು ಒಳಗೊಂಡಂತೆ ಮುಖ್ಯ ನ್ಯಾಯಾಧೀಶರಿಗೆ ಒಂದು ಪತ್ರವನ್ನು ಬರೆಯಿರಿ.

ಶ್ರೀ ಎಂ.ಸಿ.ನಾಣಯ್ಯ:- ನಾವು ತೆಗೆದುಕೊಂಡಿರತಕ್ಕಂಥ ಕ್ರಮ ಹೇಳಿಬಿಡುತ್ತೇನೆ ಮಾನ್ಯ ಸಭಾಧ್ಯಕ್ಷರೇ, ಅವರು 8.2.1996ನೇ ಇಸ್ವಿಯಲ್ಲಿ ಮುಖ್ಯ ನ್ಯಾಯಾಧೀಶರಿಗೆ ಒಂದು ಪತ್ರವನ್ನು ಬರೆದರು. "Kindly refer to my letter dated 5-1-96. I am graceful fo the gracious gesture to reconsider the demand to establish a Bench of the High Court in Hubli-Dharwad in deference to my request". ಇದಾದಮೇಲೆ,

ಶ್ರೀ ಬಿ.ಎಸ್.ಯಡಿಯೂರಪ್ಪ:- ಮುಖ್ಯ ನ್ಯಾಯಾಧೀಶರಾದ ಫೇಂಡ್ಸೆಯವರ ತೀರ್ಮಾನವನ್ನು ತಾವು ಹೇಳಿದಿರಿ. ಆದರೆ ಹಿಂದೆ ಇದ್ದಂಥ ಚೀಫ್ ಜಸ್ಟಿಸ್ ದಿ.ಎಂ.ಚಂದ್ರಶೇಖರ್‌ರವರು ಒಂದು ಉತ್ತರ ಕೊಟ್ಟಿದ್ದಾರೆ. ಅದನ್ನೂ ಕೂಡ ಒಂದು ಸಾರಿ ಓದಿಬಿಡಿ.

ಶ್ರೀ ಎಂ.ಸಿ.ನಾಣಯ್ಯ:- ಒಂದು ಕಾಲದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಾದ ಮೇಲೆ ನಾವು ಹಳೆ ಕಾಲಕ್ಕೆ ಹೋಗಬೇಕಾಗಿಲ್ಲ.....

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರೂ ಚೀಫ್ ಜಸ್ಟಿಸ್ ಆಗಿ ಮಾಡಿದ್ದಾರೆ, ಅವರು ಅಲ್ಲಿ ಅಗತ್ಯ ಇದೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಆ ಸಮಯದಲ್ಲಿ ಹುಬ್ಬಳ್ಳಿಯಲ್ಲಿ.....

ಅಧ್ಯಕ್ಷರು:- ಅವರು ಹೇಳಿದ್ದಾರೆ ಕರೆಕ್ಟ್. ದಯಮಾಡಿ ಪ್ರೊಸೀಡಿಂಗ್ಸ್‌ನ್ನು ಕೇರ್‌ಫುಲ್ಲಾಗಿ ಅಬ್ಸರ್ವ್ ಮಾಡಿ. ಅಂದಿನ ಮುಖ್ಯಮಂತ್ರಿಗಳು ಕೇಂದ್ರದ ಕಾನೂನು ಸಚಿವರಿಗೆ ಭೇಟಿ ಮಾಡಿದಾಗ ಅವರು ಹೇಳಿದರು. ನಿಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಅಭಿಪ್ರಾಯ ಮುಖ್ಯ ಎನ್ನತಕ್ಕಂಥ ವಿಚಾರಗಳನ್ನು ತಿಳಿಸಿದ್ದಾರೆ. ಚಂದ್ರಶೇಖರ್‌ರವರು ಆವತ್ತು ಹೇಳಿದ್ದುದು ಅಪ್ರಸ್ತುತ ಎಂದು ಅವರು ಹೇಳುತ್ತಿಲ್ಲ. ಕಾನೂನು ಸಚಿವರು ಸುಪ್ರೀಂ ಕೋರ್ಟಿನವರು ಈ ರೀತಿಯ ಒಂದು ಅಭಿಪ್ರಾಯವನ್ನು ಕೊಟ್ಟರು, ಶ್ರೇಷ್ಠ ನ್ಯಾಯಾಲಯದ ಅಭಿಪ್ರಾಯ ಮುಖ್ಯವಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಸಜೆಸ್ಟ್ ಮಾಡುತ್ತಿದ್ದೇನೆ.....

ಶ್ರೀ ಬಿ.ಎಸ್.ಯಡಿಯೂರಪ್ಪ:- ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಡಿ.ಎಂ.ಚಂದ್ರಶೇಖರ್‌ರವರು ಇದೇ ಪ್ರಶ್ನೆ ಬಂದಾಗ

ಹುಬ್ಬಳ್ಳಿಯಲ್ಲಿ ನ್ಯಾಯಪೀಠ ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಈ ಹೋರಾಟ ಇಪ್ಪತ್ತು ವರ್ಷಗಳಿಂದ ನಡೆಯುತ್ತಿದೆ, ಸರ್ಕಾರ ಯಾವುದೋ ಒಂದು ಕುಂಟು ನೆಪ ಹೇಳುವುದು ಬೇಡ, ಹಿಂದೆ ಅವರು ಒಪ್ಪಿಕೊಂಡಿದ್ದಾರೆ, ಬೇಕಾದರೆ ತಾವು ಕನ್ಸಲ್ಟೇಷನ್ ಮಾಡಿ.

ಶ್ರೀ ಎಂ.ಸಿ.ನಾಣಯ್ಯ:- ಕುಂಟು ನೆಪ ಅಲ್ಲ. ಇದರ ಬಗ್ಗೆ ಸರ್ಕಾರಕ್ಕೂ ಕೂಡ ಆಸಕ್ತಿ ಇದೆ. ದಯವಿಟ್ಟು ಕೇಳಿ ಆ ಕಾಲದಲ್ಲಿ ಮುಖ್ಯ ನ್ಯಾಯಾಧೀಶರು ಕೊಟ್ಟಿರತಕ್ಕಂಥ ತೀರ್ಪನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಕೇಂದ್ರಸರ್ಕಾರ ಯಾವುದೇ ರೀತಿಯ ಕ್ರಮ ಕೈಗೊಳ್ಳಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಅದು ವ್ಯಾಲಿಡ್ ಇಲ್ವೇ ಹಾಗಾದರೆ? ಆ ರೀತಿ ಒಬ್ಬ ಲಾ ಮಿನಿಸ್ಟರ್ ಉತ್ತರ ಕೊಟ್ಟರೆ ನಾನೇನು ಹೇಳಲಿ? ಶ್ರೀ ಡಿ.ಎಂ.ಚಂದ್ರಶೇಖರ್ ನ್ಯಾಯಾಧೀಶರಾಗಿ ಹೇಳಿದ್ದೇನಿದೆ ಅದನ್ನೂ ಕೂಡ ಹೇಳಿ.

ಶ್ರೀ ಎಂ.ಸಿ.ನಾಣಯ್ಯ:- ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮವನ್ನು ಹೇಳುತ್ತೇನೆ. ಅದು ಆದಮೇಲೆ ನಾವು ಏನು ಕ್ರಮ ಕೈಗೊಂಡಿದ್ದೇವೆ ಅದನ್ನು ಹೇಳುತ್ತೇನೆ. ನಾವು ಏನು ಸಲಹೆ ಮಾಡಿದ್ದೇವೆಂದು ಹೇಳುತ್ತೇನೆ ದಯಮಾಡಿ ಸಹಕರಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮಗೆ ಗೊತ್ತಿಲ್ಲವೆಂದು ನಾನು ಹೇಳಲಿಲ್ಲ. ನೀವು ಸರ್ವಜ್ಞರು ಇರಬಹುದು.

ಅಧ್ಯಕ್ಷರು:- ಸುಮ್ಮನೆ ಸಮಯ ವ್ಯರ್ಥವಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ:- ಇಂಥ ಒಂದು ಪ್ರಮುಖವಾಗಿರತಕ್ಕಂಥ ವಿಚಾರದಲ್ಲಿ ಸರ್ಕಾರ ಕುಂಟುನೆಪ ಇಟ್ಟುಕೊಂಡು ಹೇಳಲಿಲ್ಲ. ಸರ್ಕಾರ ಕುಂಟು ನೆಪದ ಮೇಲೆ ಹೋಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇಪ್ಪತ್ತು ವರ್ಷಗಳಿಂದ ಕೊಡಬೇಕೆಂದು ಸತತವಾಗಿ ಹೋರಾಟ ಮಾಡುತ್ತಿದ್ದೇವೆ. ನಮ್ಮ ಅಂದಿನ ಮುಖ್ಯಮಂತ್ರಿಗಳಾದ ದೇವೇಗೌಡರು ಪ್ರಧಾನಿಯವರಿಗೆ ಪತ್ರವನ್ನು ಬರೆದರು. ಏಕೆ ಬರೆದರು?

(ಗೊಂದಲ)

+ಶ್ರೀ ಎಂ.ಸಿ.ನಾಣಯ್ಯ:- ಹೇಳುವುದನ್ನು ಕೇಳಿ. ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಒಂದು ಪತ್ರವನ್ನು ಹೈಕೋರ್ಟಿನ ಮುಖ್ಯನ್ಯಾಯಾಧೀಶರಿಗೆ ಬರೆದರು:-

"My dear Chief Justice,

Kindly refer to your letter dated 2-1-1996 from my predecessor and reply dated 5-1-1996 of Sri Madhav.L.Pendse, the then Chief Justice. The State Government is grateful for the gracious decision taken to reconsider the demand for establishment of a Bench of the High Court of Karnataka at Hubli-Dharwad. As the matter is pending for a long time and Members of both the Legislative Assembly andthe Legislative Council are requesting for the establishment of a Bench, I will request you to convey the promised decision of the High Court in the matter at the earliest"

This was written on 5-7-1996. The matter is pending before the High Court and a decision will have to be taken by the High Court.

ಮಾನ್ಯ ಸಭಾಧ್ಯಕ್ಷರೇ, ಸೆಕ್ಷನ್ 51ರಲ್ಲಿ ಯಾವುದಾದರೊಂದು ಬೆಂಚನ್ನು ಹೊರಗಡೆ ತೆಗೆಯಬೇಕಾದರೆ ಚೀಫ್ ಜಸ್ಟಿಸ್ ಮತ್ತು ಹೈಕೋರ್ಟಿನ ಒಂದು ಸಮ್ಮತಿ ಕೊಟ್ಟಮೇಲೆ, ಆ ಕನ್ಸಲ್ಟೇಷನ್ ಕೊಟ್ಟಾದಮೇಲೆ ನಾವು ಕೇಂದ್ರ ಸರ್ಕಾರಕ್ಕೆ ಹೇಳಿಯಾದ ಮೇಲೆ ಅಲ್ಲಿಂದ ಅದು ರಾಷ್ಟ್ರಪತಿಯವರಿಗೆ ಹೋಗಿ ಅವರು ಇದರ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ. ಬಹುಶಃ ಅವರು ಹೇಳಿದ್ದ ಹಾಗೆ ನಾನೂ ಕೂಡ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅವರಿಗೆ ಮನವರಿಕೆ ಮಾಡುವ ಕೆಲಸವನ್ನು ಮಾಡುತ್ತೇನೆ. ಅದು ಆದಮೇಲೆ ಕೇಂದ್ರ ಸರ್ಕಾರಕ್ಕೆ ಹೋಗಿ ಪ್ರಧಾನಿಗಳವರ ಹತ್ತಿರ ಕಾನೂನು ಸಚಿವರನ್ನು ಕರೆಸಿ ಈ ಕೆಲಸವನ್ನು ಮಾಡಲು ಪ್ರಯತ್ನ ಮಾಡುತ್ತೇನೆ. ಇದರ ಜೊತೆಯಲ್ಲಿ ಪ್ರಮೀಳಾ ನೇಸರ್ಗಿಯವರು ಹೇಳಿರತಕ್ಕಂಥ ವಿಚಾರ ಅಂದರೆ ಸುಪ್ರೀಮ್ ಕೋರ್ಟಿನ ಒಂದು ಬೆಂಚನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸುವ ಬಗ್ಗೆ ತಕ್ಷಣ ನಾವು ಪ್ರಧಾನ ಮಂತ್ರಿಗಳವರ ಜೊತೆ ಚರ್ಚೆ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಿ ನಿಮ್ಮೆಲ್ಲರಿಗಿಂತಲೂ ಹೆಚ್ಚು ಆಸಕ್ತಿ ನಮಗೂ ಕೂಡ ಇದೆ ಎಂದು ಹೇಳುತ್ತೇನೆ. ಮಾನ್ಯ ಖರ್ಗೆಯವರು ಒಂದು ಪ್ರಶ್ನೆಯನ್ನು ಎತ್ತಿದರು.....

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬಯಸುತ್ತೇನೆ.

ಅಧ್ಯಕ್ಷರು:- ಏಕೆ ಜಗದೀಶ್ ನಿಮಗೆ ಸಮಾಧಾನವಾಗಲಿಲ್ಲವೇ? ಸ್ಪಷ್ಟವಾದ ಉತ್ತರ ಎಂದರೇನು? ಅವರು ಮುಚ್ಚಳಿಕೆ ಬರೆದು ಕೊಡಬೇಕೇ? I don't understand.

ಅಷ್ಟು ಸ್ಪಷ್ಟವಾಗಿ ಅವರು ಹೇಳಿದಮೇಲೆ,

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೇ, ನಾನು ಹುಬ್ಬಳ್ಳಿಯಲ್ಲಿ ಇದ್ದು ಬಂದಿದ್ದೇನೆ.

ಅಧ್ಯಕ್ಷರು:- ಅದು ಏನಾದರೂ ಇರಬಹುದು. ಅವರು ಹೇಳಿದ್ದು ಸ್ಪಷ್ಟವಾಗಿಲ್ಲವೇ? ಇನ್ನು ಯಾವ ತರಹ ಸ್ಪಷ್ಟವಾಗಿ ಎಂದರೆ? ಪ್ರಮೀಳಾರವರೇ, ನೀವು ಕಾನೂನು ಸಚಿವರಾಗಿದ್ದರೆ ಏನು ಉತ್ತರ ಕೊಡುತ್ತಿದ್ದಿರಿ?

ಶ್ರೀ ಚಂದ್ರಕಾಂತ ಜಿ.ಬೆಲ್ಲದ:- ಅಲ್ಲಿಯ ಜನ ಯಾರನ್ನೂ ಬಿಡುವುದಿಲ್ಲ. ನಮ್ಮನ್ನೆಲ್ಲಾ ಘೇರಾವ್ ಹಾಕುತ್ತಿದ್ದಾರೆ.

ಅಧ್ಯಕ್ಷರು:- ಅವರು ಅಷ್ಟು ಸ್ಪಷ್ಟವಾಗಿ ಹೇಳಿದ್ದಾರೆ, ಇದೇ ತಿಂಗಳು 9ನೇ ತಾರೀಖು ಪತ್ರವನ್ನು ಬರೆದಿದ್ದಾರೆ, ನಾನು ಮತ್ತು ಮುಖ್ಯಮಂತ್ರಿಗಳು ಮುಖ್ಯನ್ಯಾಯಾಧೀಶರನ್ನು ಭೇಟಿ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

(ಶ್ರೀ ಚಂದ್ರಕಾಂತ ಜಿ.ಬೆಲ್ಲದ, ಶ್ರೀ ಜಗದೀಶ್ ಶೆಟ್ಟರ್ ಶ್ರೀ ಅಶೋಕ್ ಕಾಟ್ಟೆರವರು ಈ ಸಂದರ್ಭದಲ್ಲಿ ಬಾವಿಯಲ್ಲಿ ಧರಣಿಗೆ ಕುಳಿತರು)

MR.SPEAKER:- If they don't understand the language, ನಾನು ಏನು ಮಾಡುವುದಕ್ಕಾಗುತ್ತದೆ? ಸದನವನ್ನು ಹೇಗೆ ನಡೆಸಲು ಆಗುತ್ತದೆ? ಅವರು ಅಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. ಈ ತಿಂಗಳು 9ನೇ ತಾರೀಖು ಪತ್ರ ಬರೆದಿದ್ದಾರೆ. ಅಲ್ಲದೇ ಇದರ ಬಗ್ಗೆ ಅವರು ಮತ್ತು ಮುಖ್ಯಮಂತ್ರಿಗಳು ಚೀಫ್ ಜಸ್ಟೀಸ್‌ರವರನ್ನು ಭೇಟಿಯಾಗಿ ಮಾತನಾಡುತ್ತೇವೆ ಎಂದು ಹೇಳಿದ್ದಾರೆ.

(ಈ ಹಂತದಲ್ಲಿ ಧರಣಿ ಬಾವಿಯಲ್ಲಿದ್ದ ಶ್ರೀ ಚಂದ್ರಕಾಂತ್ ಬೆಲ್ಲದ, ಅಶೋಕ್ ಕಾಟ್ಟೆ ಮತ್ತು ಜಗಧೀಶ್ ಶೆಟ್ಟರ್ ಮಾತನಾಡುತ್ತಿದ್ದಾಗ ಮತ್ತೊಬ್ಬ ಸದಸ್ಯರು ಅವರ ಸ್ಥಾನದಲ್ಲಿ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದಾಗ)

MR.SPEAKER:- Please sit down. Mr.Sriram Reddy you can mention the next subject: If my humility is not properly understood, I become helpless. You had your say. ನಾನು ತಮ್ಮಲ್ಲಿ ಎಲ್ಲರಲ್ಲೂ ಕೈ ಜೋಡಿಸಿ ವಿನಂತಿ ಮಾಡಿಕೊಳ್ಳುತ್ತೇನೆ. ಸದಸ್ಯರು ಬಂದು ನನ್ನನ್ನು ಭೇಟಿಯಾದಾಗ ನಾನು ಅವರಿಗೆಲ್ಲಾ ಪ್ರಾಧಾನ್ಯತೆ ಮೇಲೆ ಅವಕಾಶ ಕೊಡುತ್ತಿದ್ದೇನೆ. ಅವರು ಎಲ್ಲರೂ ಆ ಭಾಗದವರು ಎಂದು ಮಾತನಾಡಿ ಎಂದೂ ಕೂಡ ಹೇಳಿದ್ದೇನೆ. ಅಷ್ಟು ಸ್ಪಷ್ಟವಾಗಿ ಸರಳವಾದಂಥ ರೀತಿಯಲ್ಲಿ ತಾವು ಏನೆಲ್ಲಾ ಮಾಡಬಹುದು ಎಂದು ಸರ್ಕಾರದ ವತಿಯಿಂದ ಅವರು ಹೇಳಿದ್ದಾರೆ. ಅದಾದ ಮೇಲೆ

10 ವರ್ಷದಿಂದ ನೆನೆಗುದಿಗೆ ಬಿದ್ದಿದೆ ಎಂದು ಹೇಳಿದರೆ ಅದಕ್ಕೆ ಏನು ಮಾಡುವುದಕ್ಕಾಗುತ್ತದೆ? ಹೇಳಿ. ಆಮೇಲೆ ನಾನು ಇನ್ನೊಂದು ಮಾತನ್ನು ಹೇಳುತ್ತೇನೆ, ಈ ಡಿಬೆಟ್ಸ್‌ಗೆ ಲಾಸ್ ಆಗತಕ್ಕಂಥ ಟೈಮನ್ನು ಡಿಮ್ಯಾಂಡ್ ಮೇಲೆ ಇನ್‌ಕ್ರೀಸ್ ಮಾಡುವುದಕ್ಕೆ ಇನ್ನು ಸಾಧ್ಯವಿಲ್ಲ. ನೀವು ಎಷ್ಟು ಹೊತ್ತಾದರೂ ಮಾತನಾಡಿ. ನನ್ನದೇನೂ ಅಭ್ಯಂತರವಿಲ್ಲ. ನಾನೂ ಸಹಕರಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಎಲ್ಲಾ ರೀತಿಯ ಸಹಕಾರಗಳನ್ನು ಕೇಳಿದರೂ ಕೊಡುತ್ತಿದ್ದೀರಿ. ಸರ್ಕಾರವೂ ಸಹ ತನ್ನ ಸ್ಪಷ್ಟವಾದಂಥ ನಿಲುವನ್ನು ಮತ್ತು ಅದರ ಬಗ್ಗೆ ತಮ್ಮ ಒಂದು ನಿಶ್ಚಿತವಾದ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲೇನಾಗಿದೆಯೆಂದರೆ ಅಲ್ಲಿಯ ಮೂವರು ಶಾಸಕರು ರಾಜೀನಾಮೆಯನ್ನು ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿಯ ಜನರು ಆ ರೀತಿಯ ಒತ್ತಾಯವನ್ನು ಮಾಡುತ್ತಿದ್ದಾರೆ. ಕಳೆದ ಹದಿನೈದು ಇಪ್ಪತ್ತು ವರ್ಷಗಳಿಂದ ಈ ಪರಿಸ್ಥಿತಿ ಒದಗಿಬಂದಿದೆ. ನೀವು ಶಾಸಕರಾಗಿ ನಿಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ ಎನ್ನುವಂಥ ಭಾವನೆಯನ್ನು ಜನರು ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕಾಗಿ ಗಂಭೀರವಾಗಿ ಈ ಸದನದ ಗಮನವನ್ನು ಸೆಳೆಯುವಂಥ ಒಂದು ಪ್ರಯತ್ನ. ಶ್ರೀ ಚಂದ್ರಶೇಖರ್‌ರವರೂ ಕೂಡ ಇದರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಕೊಟ್ಟಿದ್ದರು. ಅಲ್ಲಿ ಹೈಕೋರ್ಟ್ ಪೀಠವನ್ನು ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ ಎಂದು ಹೇಳಿದ್ದರು. ಅದೇ ಒಂದು ಕಾರಣವನ್ನು ಇಟ್ಟುಕೊಂಡು ನೀವು ಒಂದು ಕನ್ಸ್‌ಲ್ಟೇಷನ್ ಮಾಡಿ ನೀವು ಅಲ್ಲಿ ನ್ಯಾಯ ಪೀಠ ಮಾಡುವುದಕ್ಕೆ ಏನೂ ಅಡ್ಡಿಯಿಲ್ಲ. ಇವೊತ್ತು ಪ್ರಧಾನಿಗಳಿಗೂ ಕೂಡ ಅದೇ ಅಭಿಪ್ರಾಯವಿದೆ.

+ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ತಿಂಗಳ 9ನೇ ತಾರೀಖು ಬರೆದ ಪತ್ರವನ್ನು ಓದಿದ್ದಾರೆ. ಆನಂತರ ಮತ್ತೊಮ್ಮೆ ನಾನು ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿ, ಈಗ ಏರಿಯಾ ಡೆವಲಪ್‌ಮೆಂಟ್ ಇಂಬ್ಯಾಲೆನ್ಸ್ ಆಗಿದೆಯೆಂದು ಉತ್ತರ ಕರ್ನಾಟಕದ ಕೆಲವು ಜನರು ಈ ಸಂದರ್ಭದಲ್ಲಿ ಬಹಳ ಹೆಚ್ಚು ಇದರ ಬಗ್ಗೆ ಕೇಳಿದ್ದಾರೆ. ಅದು ರೈಲ್ವೆ ವಲಯ ಇರಬಹುದು, ಹೈಕೋರ್ಟ್ ಪೀಠ ಇರಬಹುದು. ಮಾನ್ಯ ವಿರೋಧ ಪಕ್ಷದ ನಾಯಕರೇ, ಕಾನೂನು ಮಂತ್ರಿಗಳು ವಿವರವಾಗಿ ಹೇಳಿದರು. ನಾನೂ ಕೂಡ ಪ್ರಯತ್ನವನ್ನು ಪಡುತ್ತಿದ್ದೇನೆ. ಪ್ರಧಾನಮಂತ್ರಿಗಳು ನಮ್ಮವರೇ ಆಗಿರುವುದರಿಂದ ನಾವು ಈ ಕಾಲದಲ್ಲಿ ಮಾಡಿಬಿಡಬಹುದೇನೋ ಎನ್ನುವ ರೀತಿಯಲ್ಲಿ.... ಹೈಕೋರ್ಟ್‌ಗೆ ಆರ್ಡರ್‌ನ್ನು ಮಾಡುವುದಕ್ಕಾಗುವುದಿಲ್ಲ. ನಾವೇನೇ ಸದನದಲ್ಲಿ ಒಮ್ಮತ ಇದ್ದರೂ ನಾವು ಹೈಕೋರ್ಟ್‌ಗೆ ಆರ್ಡರ್ ಮಾಡುವುದಕ್ಕೆ ಆಗುವುದಿಲ್ಲ ಅಥವಾ ಅವರ ಕನ್ಸೆಂಟ್ ಇಲ್ಲದೇ ನಾವು ಬಿಲ್ಡಿಂಗ್ ಓಪನ್ ಮಾಡಬಹುದು, ಆದರೆ ಜಡ್ಜಸ್ ಪೋಸ್ಟ್ ಮಾಡುವವರು ಯಾರು? ಅದಕ್ಕೆ ನಮ್ಮ ಜಿನಿಯನ್ ಡಿಫಿಕಲ್ಟೀಸ್ ಹೇಳಿ, ನಮ್ಮ ಇಚ್ಛೆ ಹೇಳಿ ಅದನ್ನು ಅಧ್ಯಕ್ಷರೂ ಒಪ್ಪಿಕೊಂಡ ಮೇಲೆ, ಅಲ್ಲಿ ಜನರು ಗಲಾಟೆ

ಮಾಡುತ್ತಾರೆಂದು ಹೇಳಿ ಹೀಗೆ ಸದನದಲ್ಲಿ ಇಲ್ಲಿ ಕುಳಿತುಕೊಳ್ಳುವುದು ಸರಿಯಲ್ಲ, ಚಂದ್ರಕಾಂತ್ ಬೆಲ್ಲದ್‌ರವರೇ, ಅಲ್ಲಿ ಜನ ಏನಪ್ಪಾ ನಮ್ಮ ಎಂ.ಎಲ್.ಎ.ಗಳು ಭಯಂಕರ ಹೋರಾಟ ಮಾಡಿದ್ದಾರೆಂದು ತಿಳಿದುಕೊಳ್ಳುತ್ತಾರೆ. ನಾನು ಹೀಗೆ ಹೋರಾಟ ಮಾಡಿದ್ದೇನೆ. ನಾನು ಇದನ್ನೇ ಮಾಡಿದವನು.

(ಶ್ರೀ ಅಶೋಕ್ ಕಾಟ್ವೆ ಬಾವಿಯಲ್ಲಿ ಮಾತನಾಡುತ್ತಿದ್ದಾಗ)

ಶ್ರೀ ಜೆ.ಹೆಚ್.ಪಟೇಲ್:- ನೀವು ವಕೀಲರೆ?

ಶ್ರೀ ಅಶೋಕ್ ಕಾಟ್ವೆ:- ಹೌದು.

ಶ್ರೀ ಜೆ.ಹೆಚ್.ಪಟೇಲ್:- ಮತ್ತೆ all the more he cannot be pardenedx for this. ನೀವು ವಕೀಲರೇ ಆಗಿ....

MR.SPEAKER:- My biggest problem in this House is to deal with the Advocates, who are least conversant with the practice either in the House or in courts. I am very sorry to make this remark. All the more he being an advocate, he should be in a position to understand the practical difficulties.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವೂ ಸಹ ಹುಬ್ಬಳ್ಳಿಯ ಶಾಸಕರಾಗಿದ್ದರೆ ಇದೇ ಕೆಲಸವನ್ನು ಮಾಡುತ್ತಿದ್ದಿರಿ. ಆ ರೀತಿಯ ಒತ್ತಾಯ ಅಲ್ಲಿದೆ. ಅಲ್ಲಿಯ ಜನರಿಗೆ ನಾವು ಹೇಳಬೇಕಾಗಿದೆ. 'ನಮ್ಮ ಶಕ್ತಿ ಮೀರಿ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಿದ್ದೇವೆ ಎಂದು'. ನೀವು ದಯಮಾಡಿ ಅದಕ್ಕೆ ಒಂದು ವಿಶೇಷವಾದ ಗಮನವನ್ನು ಕೊಡಿ. ಕನ್ಸ್‌ಲ್ಟೇಷನನ್ನು ಮಾಡಿ ಎಂದು ಹೇಳಿದನೇ ಹೊರತು ಅವರ ಒಪ್ಪಿಗೆ ಇಲ್ಲದೇ ಮಾಡುವುದಕ್ಕೆ ಆಗುವುದಿಲ್ಲ ಎಂದರೆ.....

MR.SPEAKER:- Madam, (pointing to Smt.Pramila Nesargi) I would like to know. You are a practising Advocate. Can this House direct the High Court? Please tell me. Can we direct the High Court? You have a very bad case on hand.

SRI Y.RAMAKRISHNA:- I am sorry Sir, I am not a party to that. ಅದಕ್ಕೋಸ್ಕರ ನಾನು ಮಾತನಾಡಬಾರದು ಎಂದು ಯೋಚನೆ ಮಾಡಿದೆ. ನಾನು ಆವಾಗ ಕಾನೂನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. When we took that decision, ಚಂದ್ರಶೇಖರ್‌ರವರು ಚೀಫ್ ಜಸ್ಟೀಸ್ ಆಗಿದ್ದರು. ಈಗ

ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಕೊಟ್ಟಿದ್ದಾರೆ, ಮದ್ರಾಸ್‌ನಲ್ಲಿ ಕೊಟ್ಟಿದ್ದಾರೆ. Will it take 20 years to implement this decision? That is what I want to know. ಈಗ ಅವರು ಕೇಳಿರತಕ್ಕಂಥದ್ದು ನಿಜ, ಅದನ್ನು ನಾನು ಒಪ್ಪುತೇನೆ, but is is not final. It is recommendation. ಅವರನ್ನು ಕೇಳಬೇಕು ಎಂದು ಇದೆ, ಆದರೆ ಅವರು ಕೇಳಿದ ಹಾಗೆ ನಡೆಯಬೇಕು ಎಂದೇನೂ ಇಲ್ಲವಲ್ಲ !

ಶ್ರೀ ಯು.ಆರ್.ಸಭಾಪತಿ:- ಇವರು ಕಾನೂನು ಮಂತ್ರಿಗಳಾಗಿದ್ದರಲ್ಲ ಆಗ ಏನು ಮಾಡಿದರು ಇವರು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ವೈ.ರಾಮಕೃಷ್ಣರವರು ಕಾನೂನು ಮಂತ್ರಿಯಾಗಿದ್ದಾಗ ಹೈಕೋರ್ಟ್ ಪೀಠ ಏಕೆ ಮಾಡಲಿಲ್ಲ? ನಿಮ್ಮ ಕೈಯಲ್ಲಿ ಅಧಿಕಾರ ಆಗ ಇತ್ತಲ್ಲಾ, ಆಗ ಏಕೆ ಮಾಡಲಿಲ್ಲ?

ಅಧ್ಯಕ್ಷರು:- ಒಂದು ಪ್ರಶ್ನೆಯನ್ನು ತಮ್ಮನ್ನು ಕೇಳುತ್ತೇನೆ. ಅವರ ಅಭಿಪ್ರಾಯ ಪಡೆದುಕೊಳ್ಳಬೇಕು ಎಂದು ಇದೆ. ಅವರು ಹೇಳಿದಂತೆ ಮಾಡಬೇಕೆಂದೇನೂ ಇಲ್ಲ ಎಂದಿರಿ. ಆಲ್‌ರೈಟ್. I would put a question to you. The Government of Karnataka tomorrow decides to have a Bench. Who is to go there and work as judges? ಲಾ ಮಿನಿಸ್ಟರ್ ಅಥವಾ ಜೆ.ಹೆಚ್.ಪಟೇಲ್‌ರು ಹೋಗಿ ಮಾಡುವುದೇ?

SRI Y.RAMAKRISHNA:- Time limitation ಆಯಿತು. 20 ವರ್ಷವಾದರೂ ಆಗದಿದ್ದರೆ ಜನಗಳು ನಮ್ಮನ್ನು ಸುಮ್ಮನೆ ಬಿಡುತ್ತಾರೆಯೇ?

MR.SPEAKER:- Please kindly answer my question. The Government of Karnataka will decide to have a Bench of the Karnataka High Court in Hubli tomorrow. Who is to post the judges? Kindly answer my question. It is true that we don't have to look for the direction from the High Court. But are we in a position or are we competent or are we entitled to direct the High Court of Karnataka?

ಶ್ರೀ ವೈ.ರಾಮಕೃಷ್ಣ:- ನಾನೇನು ಡೈರೆಕ್ಟ್ ಮಾಡಬಹುದು ಎಂದು ಹೇಳಿದೆನೆ? ನಮ್ಮ ಕಷ್ಟ ಕೂಡ ಅರ್ಥವಾಗಬೇಕಲ್ಲಾ. ಇದು ರಾಜಕೀಯ ಅಲ್ಲ ಸ್ವಾಮಿ, ದಯವಿಟ್ಟು ಕ್ಷಮಿಸಿ, ನಾವು ಮಾಡುತ್ತಿರತಕ್ಕಂಥದ್ದು ಜನಗಳಿಗೆ ನ್ಯಾಯ ಮನೆ ಬಾಗಿಲಿಗೆ ಸಿಗಬೇಕು ಎನ್ನುವ ತತ್ವವನ್ನು ನಾವು ಒಪ್ಪಿಕೊಂಡ ಮೇಲೆ 20 ವರ್ಷಗಳ ಕಾಲ ಹೋರಾಟ ನಡೆಸಿ,

ಕಾನ್‌ಫರೆನ್ಸ್‌ಗಳನ್ನು ಮಾಡಿ, ಸರ್ಕಾರದ ಗಮನಕ್ಕೆ ತಂದು, ಸರ್ಕಾರ ಒಪ್ಪಿಕೊಂಡು, ಹೈಕೋರ್ಟ್ ಚೀಫ್ ಜಸ್ಟೀಸ್ ಒಪ್ಪಿಕೊಂಡು ನಾನೇ ಅದನ್ನು ಪ್ರಿಡಿಸೈಡ್ ಮಾಡಿ ಡಿಸಿಷನ್ ತೆಗೆದುಕೊಂಡ ಮೇಲೆ ಇಪ್ಪತ್ತು ವರ್ಷಗಳಾದರೂ ಕೂಡ ಇನ್ನೂ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದರೆ ಹೇಗೆ? ಅವರು ಒಪ್ಪುವುದೆ ಇಲ್ಲ. ಹಾಗಾದರೆ ಏನು ಮಾಡಬೇಕು?

ಶ್ರೀ ಎಸ್.ಎಸ್.ಪಾಟೀಲ್:- ಮಾಡುವುದಕ್ಕಾಗುವುದಿಲ್ಲ ಎಂದು ಸರ್ಕಾರ ಹೇಳಿಯೇ ಇಲ್ಲ.

ಶ್ರೀ ವೈ.ರಾಮಕೃಷ್ಣ:- ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ನಾವು ಅದಕ್ಕೆ ಬದ್ಧರಾಗಬೇಕೆ? ನಾವು ಕಷ್ಟಕ್ಕೀಡಾಗಬೇಕೇ? This is the question that has to be considered.

ಅಧ್ಯಕ್ಷರು:- ಒಂದು ವಿಚಾರದಲ್ಲಿ ಹೈಕೋರ್ಟ್‌ನ್ನು ಬಹಳ ಗೌರವಯುತವಾಗಿ ಕಾಣುತ್ತೀರಿ, ಇನ್ನೊಂದು ವಿಚಾರದಲ್ಲಿ ಹೈಕೋರ್ಟ್‌ನ್ನು ಎದುರು ಹಾಕಿಕೊಳ್ಳುತ್ತೀರಿ.

ಶ್ರೀ ವೈ.ರಾಮಕೃಷ್ಣ:- ನೀವು ಹೈಕೋರ್ಟ್‌ನ ಅಭಿಪ್ರಾಯ ತೆಗೆದುಕೊಂಡಿದ್ದೀರಾ?

ಅಧ್ಯಕ್ಷರು:- ಅದಕ್ಕೇ ನಾನು ಹೇಳಿದ್ದುದು, ಹೈಕೋರ್ಟ್‌ನ ಅಭಿಪ್ರಾಯ ಬೇಕೇ ಅಥವಾ ಬೇಡವೇ ಎಂದು. ಅದನ್ನು ನಿರ್ಣಯ ಮಾಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಭಾಧ್ಯಕ್ಷರೇ, ನಮ್ಮ ಒಂದು ಒತ್ತಾಯ ಮಾಡುವ ಪ್ರಯತ್ನವನ್ನು ಮಾಡಿದ್ದೇವೆ. ಸರ್ಕಾರ ಇದನ್ನು ತೀವ್ರವಾದುದೆಂದು ಪರಿಗಣಿಸಿ ಅಲ್ಲಿ ಹೈಕೋರ್ಟ್ ಪೀಠ ಆಗಬೇಕಾಗಿದೆ. ಉತ್ತರ ಕರ್ನಾಟಕದಿಂದ ಹಲವಾರು ಜಿಲ್ಲೆಗಳಿಂದ ಬರುವವರಿಗೆ ನ್ಯಾಯ ಸಿಗಬೇಕಾಗಿದೆ. ಅವರು ಬೆಂಗಳೂರಿಗೆ ಬರುವುದಕ್ಕೆ ಆಗುವುದಿಲ್ಲವೆಂದೇ ಹಿಂದಿನ ಚೀಫ್ ಜಸ್ಟೀಸ್ ಡಿ.ಎಂ.ಚಂದ್ರಶೇಖರ್‌ರವರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ದಯಮಾಡಿ ನಾನು ಇನ್ನೊಂದು ಸಾರಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅದು ಆಗುವಂತ ನೋಡಿಕೊಳ್ಳಿ. ಇದೇ ನನ್ನ ವಿನಂತಿ.

(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ಕುಳಿತಿದ್ದ ಬಿ.ಜೆ.ಪಿಯ ಮೂವರು ಸದಸ್ಯರನ್ನು ತಮ್ಮ ಸ್ಥಾನಗಳಿಗೆ ಹೋಗುವಂತೆ ಯಡಿಯೂರಪ್ಪನವರು ಸೂಚಿಸಿದರು. ಆದರೂ ಸದಸ್ಯರು ಕದಲಿರಲಿಲ್ಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಲ್ಲಿಯ ಜನಗಳ ಪ್ರತಿನಿಧಿಯಾಗಿ ಬಂದಿರುವವರು ಪ್ರಾಮಾಣಿಕವಾಗಿ ಇದರ ಬಗ್ಗೆ ಹೋರಾಟ ಮಾಡಿದ್ದಾರೆಂದು ಅವರಿಗೆ ತಿಳಿಯಬೇಕು.

ಅಧ್ಯಕ್ಷರು:- ವಿಧಾನಸಭೆ ಜನ ಪ್ರತಿನಿಧಿಗಳ ಸಭೆಯೇ ಹೊರತು ಹೋರಾಟದ ರಂಗವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆದರೆ ಅದು ಆಗುತ್ತಿದೆ.

ಅಧ್ಯಕ್ಷರು:- ನಾನು ಅಧ್ಯಕ್ಷನಾಗಿ ವಿಧಾನಸಭೆಯನ್ನು ಹೋರಾಟದ ರಂಗವಾಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಇಲ್ಲಿ ಜನ ಪ್ರತಿನಿಧಿಗಳು ಮಾತ್ರ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವೇನು ಇಲ್ಲಿ ಹೋರಾಟ ಮಾಡುವುದಕ್ಕೆ ಬಂದಿಲ್ಲ. ಜನರಿಗೆ ನ್ಯಾಯ ಒದಗಿಸಿಕೊಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ಅದನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆಂಬ ವಿಶ್ವಾಸವೂ ಕೂಡ ನಮಗಿದೆ. ನಾವೂ ಕೂಡ ಇದನ್ನು ರಣರಂಗ ಮಾಡುವುದಕ್ಕೆ ಇಲ್ಲಿಗೆ ಬಂದಿಲ್ಲ. ಸರ್ಕಾರ ನಮ್ಮ ಭಾವನೆಯನ್ನು ಅರ್ಥ ಮಾಡಿಕೊಂಡು ಸ್ಪಂದಿಸಬೇಕೆಂದು ಈ ಬಾವಿಗೆ ಬರುವಂಥದ್ದು ನಮ್ಮ ಕರ್ತವ್ಯವಾದುದರಿಂದ ಆ ರೀತಿಯ ಪ್ರತಿಭಟನೆಯನ್ನು ನಾವು ವ್ಯಕ್ತಮಾಡುತ್ತಿದ್ದೇವೆ.

(ಮೂವರು ಸದಸ್ಯರನ್ನು ಸ್ವಸ್ಥಾನಕ್ಕೆ ಹೋಗುವಂತೆ ಮತ್ತೆ ಸೂಚಿಸಿದರು)

(ಗೊಂದಲ)

(ಮಾನ್ಯ ಸದಸ್ಯರೊಬ್ಬರು ಹೈಕೋರ್ಟ್ ಪೀಠಕ್ಕಾಗಿ ಪ್ರಾಣವನ್ನು ಕೊಡಬೇಕಾಗುತ್ತದೆ ಎಂದಾಗ)

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದಲ್ಲಿ ನಾವು ಮಾಡಿರತಕ್ಕ ತಪ್ಪಾದರೂ ಏನು? ನಮ್ಮಲ್ಲೇನಾದರೂ ಲ್ಯಾಪ್ಸ್ಸ್ ಇದೆಯೇ? ನಾವು ನಿರಂತರವಾಗಿ ಪ್ರತಿ ವರ್ಷ ಮಾಡಿಕೊಂಡು ಬಂದಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಿಂದಿನ ಚೀಫ್ ಜಸ್ಟೀಸ್ರವರಾಗಿದ್ದ ಶ್ರೀ ಡಿ.ಎಂ.ಚಂದ್ರಶೇಖರ್ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಏನು ಹೇಳಿದ್ದರು ಎಂದು ಹೇಳುವ ಅಧಿಕಾರ ನನಗಿಲ್ಲವೇ? ಹಿಂದಿನ ಒಬ್ಬ ನ್ಯಾಯಾಧೀಶರು ಏನು ಹೇಳಿದ್ದರು ಎಂದು ಕೇಳುವುದಕ್ಕೆ ನನಗೆ ಅಧಿಕಾರವಿಲ್ಲವೇ ತಾವು ಇದಕ್ಕೆ ಹೇಳಬೇಕಾಗುತ್ತದೆಯಾದ್ದರಿಂದ ಈಗ ಏನಾಗಿದೆ ಅದನ್ನು ತಿಳಿಸಿ. ಮತ್ತೆ ನಾವೇನೋ ನೆಪಮಾತ್ರಕ್ಕೆ ಏನೋ ಒಂದು ಪ್ರಶ್ನೆ ಕೇಳುವುದು, ಪ್ರತಿಪಕ್ಷ ನಾಯಕರು ಏನಾದರೂ ಕೇಳಿದರೆ ಅದನ್ನು ನಿರ್ಲಕ್ಷಿಸಿ ಪಕ್ಕಕ್ಕೆ ಸರಿಸಿ ಅವರು ಏನು ಬೇಕಾದರೂ ಮಾತನಾಡಬಹುದು ಎನ್ನುವುದಾದರೆ ನಾನೂ ಕೂಡ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ.

+ಶ್ರೀ ಎಂ.ಸಿ.ನಾಣಯ್ಯ:- ಅಧ್ಯಕ್ಷರೇ, ನಾವು ಯಾವುದನ್ನೂ ಕೇಳಲಿಲ್ಲ. ಹಿಂದಿನ

ಒಂದು ಕಾಲದಲ್ಲಿ ಅಂದಿನ ಮುಖ್ಯ ನ್ಯಾಯಾಧೀಶರಾಗಿದ್ದವರು ಒಂದು ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕು ಎಂದು ಹೇಳಿದ್ದರಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸಿದ್ದರು. ಅದಾದ ಮೇಲೆ ಕೇಂದ್ರ ಸರ್ಕಾರಕ್ಕೆ ಅನುಮತಿಗಾಗಿ ಇದು ಹೋದಮೇಲೆ ಅಲ್ಲಿ ಇದಕ್ಕೆ ಯಾವುದೇ ರೀತಿಯ ಸ್ಪಂದನ ಬರದಿದ್ದಾಗ ಬಹುಶಃ ಅದು ಅಲ್ಲಿಯೇ ನಿಂತುಹೋಯಿತು.

01.10 ಪಿ.ಎಂ.

ಅದು ಆದಮೇಲೆ ಪ್ರತಿ ವರ್ಷವೂ ಕೂಡ ಒಂದು ವಿಚಾರವನ್ನು ಎತ್ತಿ ಎತ್ತಿ ಕಡೆಗೆ ಇದರ ಬಗ್ಗೆ ಒಂದು ಪೀಠವನ್ನು ಸ್ಥಾಪನೆ ಮಾಡಬೇಕು ಎಂದು ಹೇಳಿ ಹಿಂದಿನ ಸರ್ಕಾರಗಳು ಮತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾದಮೇಲೆ ಈ ಕೆಲಸವನ್ನು ಮಾಡಿ 1993ನೇ ಇಸವಿಯಲ್ಲಿ ಈ ಒಂದು ಪ್ರಶ್ನೆ ಲೋಕಸಭೆಯಲ್ಲಿ ಬಹಳ ಪ್ರಧಾನವಾಗಿ ಚರ್ಚೆಯಾಯಿತು. ನಂತರ ಅಂದಿನ ನ್ಯಾಯ ಮಂತ್ರಿಗಳಾಗಿದ್ದಂತಹವರು ಒಂದು ಹೇಳಿಕೆಯನ್ನು ಕೊಟ್ಟರು. I am quoting from the debates of the LokSabha.

"Now the latest position is that after the unanimous Resolution of both the Houses of Karnataka Legislative Assembly and the Legislative Council, the matter was taken up again and the Chief Minister was advised that he might descuss this matter with the Chief Justice of the Karnataka High Court. Once they discuss between themselves, several issues which are there for establishing the High Court Bench, then we will start processing.

Sir, this arises out of Section 51 (2) of the States Reorganisation Act. Consultation with the Chief Justice of the High Court, as you will appreciate, is very important because he has to look after the administrative work of the High Court.

Sir, I would like to assure the hon.Member that we would get in touch with the High Court, the Chief Justice as well as the Chief Minister and try to expedite it.

I only submit that unless we know the views of the Chief Justice who was responsible for running the High

Court we cannot decide about this issue."

This was what was said on the floor of the House by the then Law Minister, Mr.Bhardwaj. ಇದು, ಆದ ಮೇಲೆ ಚೀಫ್ ಜಸ್ಟೀಸ್‌ಗೆ ಒಂದು ಪತ್ರ ಬರೆದರು. ಚೀಫ್ ಜಸ್ಟೀಸ್‌ರವರು ತೀರ್ಮಾನ ತೆಗೆದುಕೊಂಡರು. ಪುನಃ ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ದೇವೇಗೌಡರು ಒಂದು ಪತ್ರವನ್ನು ಬರೆದರು. ಈಗ ಮೊನ್ನೆ ಶ್ರೀ ಜೆ.ಹೆಚ್.ಪಟೇಲ್ ಅವರು ಒಂದು ಪತ್ರವನ್ನು ಬರೆದರು. ತಾವು ದಯವಿಟ್ಟು ರೀ-ಕನ್ಸಿಡರ್ ಮಾಡಿ ಎಂದು ಕೇಳಿದ್ದಾರೆ, ಬಹುಶಃ ಯಾವುದೇ ತೀರ್ಮಾನವಾಗಬೇಕಾದರೆ ಹೈಕೋರ್ಟ್‌ನವರು ಸಮ್ಮತಿಯನ್ನು ಕೊಡದೇ ಹೋದರೆ, ಲೋಕಸಭೆಯಾಗಲಿ, ಅಥವಾ ಕೇಂದ್ರಸರ್ಕಾರವಾಗಲೀ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಷ್ಟವಾದೀತು ಎಂದು ಅವರೇ ಹೇಳಿದ್ದಾರೆ. ಇದರಲ್ಲಿ ನಮ್ಮ ಪಾತ್ರ ಏನಿದೆ. ನಮ್ಮ ಪಾತ್ರ ಸರ್ಕಾರದ ಮನವೊಲಿಸುವುದು. ಈ ಎಲ್ಲಾ ಕೆಲಸವನ್ನೂ ಮಾಡಿದ್ದೇವೆ. ಇನ್ನು ಅವರು ಹೇಳಿದ್ದಕ್ಕಿಂತ ಹೆಚ್ಚಿಗೆ ಮನವೊಲಿಸುವ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾನು ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇನ್ನೊಂದು ಬಾರಿ ನಮ್ಮ ಪರವಾಗಿ ಬರೆದು ನೋಡಿ.

ಶ್ರೀ ಎಂ.ಸಿ.ನಾಣಯ್ಯ:- ಬರೆದಿದ್ದೇವೆ, ಮೊದಲು ಅದಕ್ಕೆ ಉತ್ತರ ಬರಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಔರಂಗಾಬಾದ್‌ನಲ್ಲಿ ಆಗಲಿ ಬೇರೆ ಕಡೆ ಈ ತರಹ ಸ್ಥಾಪನೆ ಮಾಡಿದಾಗ ಹೈಕೋರ್ಟಿನ ನ್ಯಾಯಾಧೀಶರು ಒಪ್ಪಿಗೆ ಕೊಟ್ಟಿರಲಿಲ್ಲ. ಅದೇ ರೀತಿಯಲ್ಲಿ ತಾವು ಮನಸ್ಸು ಮಾಡಿದರೆ ಮಾಡುವುದಕ್ಕೆ ಸಾಧ್ಯವಿದೆ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ.

ಶ್ರೀ ಮಂಜುನಾಥ್ ಸಿ.ಕುನ್ನೂರು:- ಮಾನ್ಯ ಅಧ್ಯಕ್ಷರೇ, ಇದೇ ತಿಂಗಳ 31ನೇ ತಾರೀಖಿನ ದಿವಸ ನಮ್ಮ ಕರ್ನಾಟಕದಿಂದ ಹೋಗತಕ್ಕಂಥ ಒಂದು ನಿಯೋಗದ ಜೊತೆ ಪ್ರಧಾನಮಂತ್ರಿಗಳ ಜೊತೆ ಮಾತನಾಡಲು ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಆದುದರಿಂದ ಇವತ್ತು ರಾಜ್ಯದಲ್ಲಿ ಏನು ಪ್ರಮುಖವಾದ ಕೆಲಸ ಆಗಬೇಕಾಗಿದೆ. ಅವೆಲ್ಲವುಗಳ ಬಗ್ಗೆ ಚರ್ಚೆ ಮಾಡುತ್ತೇವೆ ಎನ್ನುವಂತಹ ಒಂದು ಅವಧಿ ಕೊಟ್ಟಿರುವುದರಿಂದ ಆ ತಾರೀಖಿನ ದಿವಸ ಅವರು ಪ್ರಧಾನಮಂತ್ರಿಗಳಿಗೆ ನಮ್ಮ ರಾಜ್ಯ ಸರ್ಕಾರದಿಂದ ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳುವಂತೆ ತಾವು ಪ್ರಯತ್ನಿಸಬೇಕು ಎನ್ನುವಂತಹ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಇದು ಬಹಳ ಸೂಕ್ಷ್ಮವಾದ ವಿಷಯ. ನಾವು ಈಗ ಮಾಡಬೇಕಾದಂತಹ ಕೆಲಸವೇನೆಂದರೆ ಈಗಿರತಕ್ಕಂಥ

ಕರ್ನಾಟಕದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಹೊಸದಾಗಿ ಬಂದಿದ್ದಾರೆ. ಅವರು ಬಹಳ ಒಳ್ಳೆಯವರು ಇದ್ದಾರೆ. ಅವರು ಭಾವನೆಗಳನ್ನು ಅರ್ಥಮಾಡಿಕೊಳ್ಳತಕ್ಕಂಥವರು ಇದ್ದಾರೆ. ಆದುದರಿಂದ ನಾವೆಲ್ಲರೂ ಹೋಗಿ ನಮ್ಮ ಭಾವನೆಗಳನ್ನು ಅವರಿಗೆ ಹೇಳಿದರೆ ಅವರು ಒಪ್ಪುತ್ತಾರೆ ಎನ್ನುವ ನಂಬಿಕೆ ಇದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ನಮ್ಮಲ್ಲಿ ಕೆಲವರನ್ನು ಕರೆದುಕೊಂಡು ಹೋಗಿ. ನಾವೆಲ್ಲರೂ ಸೇರಿ ಅವರ ಮನಸ್ಸನ್ನು ಒಲಿಸಿ ಆದಷ್ಟು ಶೀಘ್ರವಾಗಿ ಅವರ ಒಪ್ಪಿಗೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟು ಆದಷ್ಟು ಬೇಗ ಹುಬ್ಬಳ್ಳಿಯಲ್ಲಿ ನ್ಯಾಯಪೀಠ ಮಾಡುವುದಕ್ಕೆ ಅನುಕೂಲ ಎಂದು ತಿಳಿದುಕೊಂಡಿದ್ದೇನೆ. ಅದು ಆಗಬಹುದು ಎಂದು ನನ್ನ ಅನಿಸಿಕೆ. ಅವರ ಒಪ್ಪಿಗೆ ಬಾರದೇ ಇತ್ತು ಎಂದರೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಬಹಳ ಕಷ್ಟವಾಗುತ್ತದೆ. ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಒಪ್ಪಿಗೆ ಬಾರದೇ ಇದ್ದರೆ ಬಹಳ ಕಷ್ಟವಾಗುತ್ತದೆ. You take us into confidence and take us there.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೇ, ನಾನು ಅವರಿಗೆ ಪತ್ರ ಬರೆಯುವುದಕ್ಕಿಂತ ಮುಂಚೆ ಹಿಂದಿನ ಮುಖ್ಯ ನ್ಯಾಯಾಧೀಶರು ಇದು ಆಗುವುದಿಲ್ಲ ಎಂದು ಬರೆದರು. ಡಿ.ಎಂ.ಚಂದ್ರಶೇಖರ್ ಅವರು ಇದ್ದಾಗ ಮಾಡಬೇಕು ಎಂದು ಬರೆದರೂ ಸರ್ಕಾರ ಮಾಡಲಿಲ್ಲ. ಅದಕ್ಕೆ ದೆಹಲಿ ಸರ್ಕಾರ ಒಪ್ಪಲಿಲ್ಲ. ಲೋಕಸಭೆಯಲ್ಲಿ ನ್ಯಾಯ ಖಾತೆ ಸಚಿವರು ಈ ಉತ್ತರ ಹೇಳಿದರಲ್ಲಾ ಹೇಳಿದ ಮೇಲೆ ರೇ ಆಫ್ ಹೋಪ್ ಬಂದಿದ್ದು ಯಾವಾಗ ಎಂದರೆ ಇವರು ರೀ-ಕನ್ಸಿಡರ್ ಮಾಡುತ್ತೇನೆ ಎಂದು ಬರೆದರಲ್ಲಾ ಚೀಫ್ ಜಸ್ಟೀಸ್ ಅದಕ್ಕೆ ನಾನು ಉತ್ತರ ಬರೆದಿದ್ದೆ. ನೀವು ರೀ-ಕನ್ಸಿಡರ್ ಮಾಡುತ್ತೇವೆಂದು ಬರೆದಿದ್ದೀರಲ್ಲ ಅದಕ್ಕೆ ನಿಮಗೆ ಥ್ಯಾಂಕ್ಸ್ ಎಂದು ಬರೆದೆ. ಕಾನೂನು ಗೊತ್ತಿರುವ ನಿಮಗೆ ಇದು ಅರ್ಥವಾಗುತ್ತದೆ. ಹೈಕೋರ್ಟ್ ಜಡ್ಜ್‌ಸ್‌ಗೆ ನಾವು ಆರ್ಡರ್ ಮಾಡುವುದಕ್ಕೆ ಆಗುವುದಿಲ್ಲ. ಅಥವಾ ಅವರ ಒಪ್ಪಿಗೆ ಇಲ್ಲದೆ ನಾನು ಆಫೀಸ್ ಮಾಡಿಕೊಂಡು ಹೈಕೋರ್ಟ್ ಎಂದು ಬೋರ್ಡ್ ಹಾಕಿದರೆ ಯಾರೂ ಹೋಗುವುದಿಲ್ಲ. ಜಡ್ಜ್‌ಸ್‌ಗಳನ್ನು ಅವರೇ ಪೋಸ್ಟ್ ಮಾಡಬೇಕು. How can we proceed without the permission of the High Court? ಅದು ಗೊತ್ತಿಲ್ಲದೆ ನಮ್ಮ ಜನ ಅಲ್ಲಿ ಕೂಗುತ್ತಾರೆ ಎಂದರೆ ನಾನು ಏನು ಮಾಡಲಿ.

+ಅಧ್ಯಕ್ಷರು:- ನಾನು ಅಧ್ಯಕ್ಷನಾದ ಅವಧಿಯಲ್ಲಿ ಈ ಸರ್ಕಾರವನ್ನು ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗಲಿ ಅಥವಾ ಪಟೇಲರು ಮುಖ್ಯಮಂತ್ರಿಗಳಾದಮೇಲೆ ಆಗಲಿ ಸಚಿವರು ಅವರ ಕರ್ತವ್ಯ ಲೋಪ ಮಾಡಿದಾಗ ಸರ್ಕಾರ ತಾನು ಕರ್ತವ್ಯ ಲೋಪ ಮಾಡಿದಾಗ ಬಹುಶಃ ಯಾವ ಅಧ್ಯಕ್ಷರೂ ಕೂಡ ಹಿಂದಿನ ಚರಿತ್ರೆಯಲ್ಲಿ ಇಷ್ಟೊಂದು ಸಲ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರಲಿಕ್ಕಿಲ್ಲ. ಯಾವ ಅವಕಾಶಗಳನ್ನು ಕೊಡುವಾಗಲೂ ಕೂಡ ಬಹುಶಃ ಈ ಆಡಳಿತ ಪಕ್ಷದವರು ಯಾವ ಅವಕಾಶಗಳನ್ನು ಪಡೆದುಕೊಂಡೇ ಇಲ್ಲ. ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೂ ಸಹ

ಪ್ರಶ್ನೋತ್ತರ ವೇಳೆಯಲ್ಲಿ ಒಂದೆರಡು ಉಪಪ್ರಶ್ನೆಗಳನ್ನು ಕೇಳತಕ್ಕಂಥಾದ್ದನ್ನು ಬಿಟ್ಟರೆ ಈ ಕಡೆ ಅವಕಾಶ ಜಾಸ್ತಿ ಕೊಟ್ಟಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವುದಿಷ್ಟೆ ಸದನದ ಸಮಯ ವ್ಯರ್ಥವಾದರೆ ನಿಗದಿತ ಕಲಾಪಗಳನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಯಾವುದೇ ಒಂದು ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಉತ್ತರ ಕೊಟ್ಟರೆ ನನ್ನ ಮನಸ್ಸಿಗೆ ಅದು ತೃಪ್ತಿ ಆದಾಗ ಅದರ ಮೇಲೆ ಮುಂದಿನ ಸ್ಪಷ್ಟೀಕರಣ ಅಗತ್ಯವಿಲ್ಲ ಎಂದಾಗ ಮಾತ್ರ ನಾನು ಬೇಡ ಮುಂದಕ್ಕೆ ಹೋಗೋಣ ಎಂದು ಹೇಳುತ್ತೇನೆಯೇ ಹೊರತು ಯಾವುದೇ ವಿಚಾರದಲ್ಲಿ ಸರ್ಕಾರವನ್ನು ಪಾರು ಮಾಡಬೇಕು ಎಂದು ಹೇಳಿ ವಿಷಯ ಹೊರಗೆ ಬರದಂತೆ ಮಾಡತಕ್ಕಂಥ ದುಸ್ಸಾಹಸವನ್ನು ನಾನು ಎಂದೂ ಮಾಡುವುದಿಲ್ಲ. ಈ ವಿಚಾರದಲ್ಲಿ ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗಲಿ ಎಂದು ತಿಳಿಸುತ್ತಿದ್ದೇನೆ. ಮಾನ್ಯ ಈಶ್ವರಪ್ಪನವರೇ ತಾವು ಬಹಳ ಆವೇಶದಲ್ಲಿ ಮಾತನಾಡಿದಿರಿ. ಹೋರಾಟ ಮಾಡಬೇಕು ಎಂದು ಮಾತನಾಡಿದಿರಿ. ನೀವು ರಾಜಕಾರಣಿಗಳಾಗಿ, ಶಾಸಕರಾಗಿ ಹೋರಾಟವನ್ನು ಮಾಡತಕ್ಕಂಥ ಹಕ್ಕನ್ನು ಪಡೆದುಕೊಂಡಿದ್ದೀರಿ. ವಿಧಾನಸಭೆಯಲ್ಲಿ ಹೋರಾಟ ಮಾಡತಕ್ಕಂಥ ಸ್ವರೂಪ ಬೇರೆ ಇದೆ, ವಿಧಾನಸಭೆಯ ಹೊರಗಡೆ ಹೋರಾಟ ಮಾಡತಕ್ಕಂಥ ಸ್ವರೂಪ ಬೇರೆ ಇದೆ. ವಿಧಾನಸಭೆಯ ಹೊರಗಡೆ ಮಾಡತಕ್ಕಂಥ ಹೋರಾಟವನ್ನು ಇಲ್ಲಿ ಮಾಡತಕ್ಕಂಥ ಪ್ರಯತ್ನವನ್ನು ನಾನು ಅಧ್ಯಕ್ಷನಾಗಿ ಅವಕಾಶ ಮಾಡಿಕೊಡುವುದಿಲ್ಲ ಎನ್ನುವ ಮಾತನ್ನು ಮತ್ತೊಮ್ಮೆ ಎಲ್ಲಾ ಸದಸ್ಯರಿಗೂ ವಿನಯಪೂರ್ವಕವಾಗಿ ತಿಳಿಸುತ್ತಿದ್ದೇನೆ. ದಯಮಾಡಿ ಇನ್ನು ಇದರ ಬಗ್ಗೆ ಸ್ಪಷ್ಟೀಕರಣ ಬೇಕಾಗಿಲ್ಲ ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ನನಗೆ ನೋವಾಗಿರುವುದು ಏನೆಂದರೆ ವಿಧಾನಮಂಡಲದಲ್ಲಿ ಕೊಟ್ಟಂತಹ ಆಶ್ವಾಸನೆಗಳ ಬಗ್ಗೆ ಕಾರ್ಯಗತವಾಗಲಿಲ್ಲ ಎಂದರೆ ಹೋರಾಟ ಮಾಡದೇ ಏನು ಮಾಡಬೇಕು ಎಂದು ನನ್ನ ಮನಸ್ಸಿನ ಭಾವನೆಯನ್ನು ಹೇಳಿದನೇ ವಿನಹ ನಿಮ್ಮ ಬಗ್ಗೆ ನನ್ನ ಪ್ರಶ್ನೆ ಬರಲಿಲ್ಲ.

ಅಧ್ಯಕ್ಷರು:- ನನ್ನ ಪ್ರಶ್ನೆ ಅದಲ್ಲ. ಸರ್ಕಾರದವರು ಯಾವ್ಯಾವ ಆಶ್ವಾಸನೆ ಕೊಡುತ್ತಿದ್ದಾರೆ, ಯಾವಾಗ ಆಶ್ವಾಸನೆಯನ್ನು ಕೊಟ್ಟು ವಿಫಲವಾಗುತ್ತಾರೆ, ನಾನು ಅಧ್ಯಕ್ಷನಾಗಿ ಯಾವ್ಯಾವ ಆಶ್ವಾಸನೆಗಳನ್ನು ನನ್ನ ಮುಖೇನ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ನಿಗಾ ವಹಿಸುತ್ತಿದ್ದೇನೆ. ನಾನು ಆ ರೀತಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ. ನಾನು ತಮಗೆ ಇಷ್ಟೇ ಹೇಳುತ್ತಿದ್ದೇನೆ, ನಗರಪಾಲಿಕೆ ನೌಕರರ ವಿಚಾರ ಬಂತು. ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಹೇಳಿದರು, ಒಂದು ವಾರದೊಳಗೆ ತಾತ್ಕಾಲಿಕ ಪರಿಹಾರವನ್ನು ಕೊಡುತ್ತೇನೆ, ಅನಂತರ ವಿಷದವಾದಂತಹ ವಿಷಯವನ್ನು ಚರ್ಚೆಗೆ ನಾನು ತೆಗೆದುಕೊಳ್ಳುತ್ತೇನೆ. ನನ್ನ ಮನಸ್ಸಿಗೆ ಮನವರಿಕೆಯಾದರೆ ಮಾತ್ರ ಆ ಚರ್ಚೆಯನ್ನು ಅಲ್ಲಿಗೆ ಮುಕ್ತಾಯ ಮಾಡುತ್ತಿದ್ದೇನೆ, ಇಲ್ಲದೇ ಹೋದರೆ

ಮುಂದಕ್ಕೆ ಹೋಗುವುದಕ್ಕೆ ಬಿಡುತ್ತಾ ಇಲ್ಲ. ಹೈಕೋರ್ಟ್ ಪೀಠದ ವಿಚಾರ ಕೂಡ ಅಷ್ಟೇ. ಅವರು ಹೇಳಿದ್ದು ಸ್ಪಷ್ಟ ಎಂದು ನನ್ನ ಮನಸ್ಸಿಗೆ ಅನಿಸಿದಮೇಲೆ ನಾನು ಮುಂದಕ್ಕೆ ಹೋಗೋಣ ಎಂದು ಹೇಳಿದ್ದೇನೆ. ದಯಮಾಡಿ ಆವೇಶಕ್ಕೆ ಒಳಗಾಗಬೇಡಿ. ಸದನವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ನಾನು ಅದನ್ನೇ ಪ್ರತಿ ಸಲ ತಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ. ನಿನ್ನೆ ಲೋಕಸಭಾ ಅಧ್ಯಕ್ಷರು ಎಲ್ಲೋ ಒಂದು ಕಡೆ ವ್ಯಾಖ್ಯಾನ ಮಾಡಿ ಆತಂಕ ವ್ಯಕ್ತಮಾಡಿದ್ದಾರೆ. ನಾನು ಲೋಕಸಭಾ ಕಲಾಪವನ್ನು ಆಸೆ ಪಟ್ಟ ರೀತಿಯಲ್ಲಿ ನಡೆಸುವುದಕ್ಕೆ ಆಗುತ್ತಿಲ್ಲ ಎಂದು ತಿಳಿಸಿದ್ದಾರೆ. ಇಡೀ ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ವಿಶಿಷ್ಟವಾದಂತಹ ಸ್ಥಾನವನ್ನು ನಮ್ಮ ವಿಧಾನಸಭೆ ಇವತ್ತು ಪಡೆದುಕೊಂಡಿದೆ. ಇದು ನನ್ನ ಕೀರ್ತಿ ಅಲ್ಲ. ಅದನ್ನು ನಾನು ತಮ್ಮೆಲ್ಲರ ಸಹಾಕಾರದಿಂದ ನಡೆಸಬೇಕಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾವು ಇತಿಮಿತಿಗಳನ್ನು ಅರ್ಥಮಾಡಿಕೊಂಡು ಕೆಲಸ ಮಾಡುತ್ತೇವೆ. ಆ ಮೂರು ಜನ ಶಾಸಕರು ತುಂಬಾ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾಗ ಅವರ ಭಾವನೆಯನ್ನು ವ್ಯಕ್ತಪಡಿಸುವುದಕ್ಕೆ ಬಾವಿಯಲ್ಲಿ ಬಂದು ನಿಂತು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

ಅಧ್ಯಕ್ಷರು:- ನಾನು ಒಪ್ಪಿದ್ದೇನೆ, ತೊಂದರೆ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ವಿರೋದ ಪಕ್ಷದ ನಾಯಕನಾಗಿ ಅನೇಕ ಜನರು ಇಲ್ಲಿ ಕೆಲಸ ಮಾಡಿದ್ದಾರೆ. ನಾನು ಏನಾದರೂ ಪ್ರಸ್ತಾಪ ಮಾಡಿದರೆ 3-4 ನಿಮಿಷದ ಮೇಲೆ ಸಮಯ ತೆಗೆದುಕೊಳ್ಳುವುದೇ ಇಲ್ಲ. ಸಮಯ ವ್ಯರ್ಥವಾಗಬಾರದು ಎಂದು ಹೇಳಿ ಗಂಭೀರವಾಗಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಅವರು ಕೊಟ್ಟ ಉತ್ತರದಲ್ಲಿ ತೃಪ್ತಿಯಾದರೆ ನಾವು ಕುಳಿತುಕೊಳ್ಳುತ್ತೇವೆ. ಅದೇ ರೀತಿ ನಾವು ಸಹ ಸಹಕಾರ ಕೊಡಬೇಕಾಗುತ್ತದೆ. ಖಂಡಿತ ಆ ಸಹಕಾರ ನಾವು ಕೊಡುತ್ತೇವೆ.

(ಈ) ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳ ನೇರ ನೇಮಕಾತಿ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, 1993-94ನೇ ಸಾಲಿನಲ್ಲಿ ಸರ್ಕಾರ ಒಂದು ಕಾನೂನು ಮಾಡಿತ್ತು. ಅದು ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳಿಗೆ ಎಂ.ಎ, ಎಂ.ಎಸ್ಸಿಯಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದಂತಹವರಿಗೆ ನೇರ ನೇಮಕಾತಿಯನ್ನು ಕ್ಲಾಸ್-ಎ, ಕ್ಲಾಸ್-ಬಿಯಲ್ಲಿ ಮಾಡಬೇಕು ಎಂದು ಸರ್ಕಾರ ನಿಯಮ ರೂಪಿಸಿದೆ. 1984ನೇ ಇಸವಿಯಿಂದ ಇವತ್ತಿಗೂ ಕೂಡ ಸರ್ಕಾರ ಯಾವ ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳನ್ನು ಅಂಕಗಳ ಆಧಾರದ ಮೇಲೆ ನೇರವಾದಂತಹ ನೇಮಕಾತಿಯನ್ನು ಮಾಡಲೇ ಇಲ್ಲ. ಒಂದೆರಡು ಸಲ ಸರ್ಕಾರ ಇದರ ಬಗ್ಗೆ ಆಜ್ಞೆ ಹೊರಡಿಸಿದರೂ ಕೂಡ ಒಳ್ಳೆಯ ಹುದ್ದೆಗಳನ್ನು ಎಂದರೆ ಡಿವೈಎಸ್‌ಪಿ ಇಂತಹ ಹುದ್ದೆಗಳನ್ನು ಎಲ್ಲಾ ಪೂರ್ತಿ ಭರ್ತಿ ಮಾಡಿದ ಮೇಲೆ ಯಾವುದೋ ಕೆಲಸಕ್ಕೆ ಬರದಂತಹ